ಅಚಲ

ತಿಂಗಳ ಪತ್ರಿಕೆ

ಬಿಡಿಪ್ರತಿ : 4 ರೂ.

ಆಗಸ್ಟ್ - 2005

ಒಳಗೇನಿದೆ

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,

ಬೆಂಗಳೂರು

ಅಚಲ

ಸಂಪುಟ - 20 ಸಂಚಿಕೆ : 8

ಸಂಪಾದಕ ಮಂಡಲಿ

ಎನ್. ಗಾಯತ್ರಿ
ನೇಮಿಚಂದ್ರ, ದೇವಿ,
ಶಾಂತಾ ನಾಗರಾಜ್
ಹೆಚ್. ಎನ್. ಗೀತಾ
ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10/- ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು.
ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.
ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by Dr. N. Gayathri

Published by Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಇಪ್ಪತ್ತು ವರ್ಷಗಳಿಂದಲೂ ಕ್ರಮವಾಗಿ ಪ್ರಕಟವಾಗುತ್ತಾ ಬರುತ್ತಿರುವ ''ಅಚಲ ಪತ್ರಿಕೆ'' ಓದುಗರ, ಚಂದಾದಾರರ, ಬರಹಗಾರರ ಬೆಂಬಲವನ್ನು ಬಹಳವಾಗಿ ಅಪೇಕ್ಷಿಸುತ್ತದೆ. ಈ ವೇದಿಕೆಯ ಮೂಲಕ ಮಹಿಳಾ ಚಳುವಳಿಗೆ ನಿಮ್ಮ ಧ್ವನಿ ಸೇರಿಸಿ ಪತ್ರಿಕೆಯನ್ನು ಮತ್ತು ಚಳುವಳಿಯನ್ನು ಗಟ್ಟಿಗೊಳಿಸಬೇಕೆಂಬುದು ನಮ್ಮ ಸವಿನಯ ಪ್ರಾರ್ಥನೆ.

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ನ್ಯಾಯ ಎಷ್ಟೊಂದು ದುಬಾರಿ ?

ಸುಮಾರು ಹದಿನೇಳು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಸೂಪರ್‌ಕಾಪ್ ಕೆ.ಪಿ.ಎಸ್. ಗಿಲ್ ವಿರುದ್ಧದ ಲೈಂಗಿಕ ಆರೋಪಕ್ಕೆ ಕೆಳ ಕೋರ್ಟುಗಳಲ್ಲಿ ನೀಡಿದ್ದ ಶಿಕ್ಷೆಯನ್ನು ಸುಪ್ರಿಂಕೋರ್ಟು ಎತ್ತಿ ಹಿಡಿಯುವುದರ ಮೂಲಕ ಈ ಪ್ರಕರಣಕ್ಕೆ ತೆರೆ ಎಳೆದಿದೆ. ಸಮಾಜದ ಅತ್ಯುನ್ನತ ಸ್ಥಾನದಲ್ಲಿರುವ ಮಹಿಳೆ ಹಿರಿಯ ಐ.ಎ.ಎಸ್. ಅಧಿಕಾರಿ ರೂಪನ್ ದಿಯೋಲ್ ಬಜಾಜ್ ತನ್ನ ಮೇಲೆ ಲೈಂಗಿಕ ಕಿರುಕುಳ ಉಂಟು ಮಾಡಿದ ಕೆ.ಪಿ.ಎಸ್. ಗಿಲ್‌ನ ವಿರುದ್ಧ ಗಳಿಸಿದ ಜಯವಿದು. ಈ ನ್ಯಾಯ ಪಡೆಯಲು ಆಕೆ ತುಳಿದ ಹಾದಿ ಮಾತ್ರ ಹೋರಾಟದ್ದು; ಅತ್ಯಂತ ಹೆಚ್ಚು ಹಣ ಮತ್ತು ಸಮಯವನ್ನು ಖರ್ಚು ಮಾಡಿ ಪಡೆದ ಜಯವಿದು. ಇಷ್ಟೊಂದು ದುಬಾರಿಯಾಗಿ ಪಡೆದ ನ್ಯಾಯದಲ್ಲೂ ಅಪರಾಧಿಗೆ ವಿಧಿಸಿರುವ ಶಿಕ್ಷೆ ಅತ್ಯಂತ ಕಡಿಮೆಯಾದುದು, ಎಂಬುದು ಮನಸ್ಸಿನಲ್ಲಿ ಮುಳ್ಳು ಚುಚ್ಚುವಂತೆ ಮಾಡುತ್ತದೆ.

''ಸಮಾಜದಲ್ಲಿ ತಮಗಿರುವ ಸ್ಥಾನಮಾನದಿಂದಾಗಿ ಇಂತಹದೊಂದು ಪ್ರಕರಣ ತಮಗೂ ಆಗಬಹುದೆಂದುಕೊಂಡಿಲ್ಲದೇ ಇದ್ದದ್ದರಿಂದ ಇದೊಂದು ದೊಡ್ಡ ಆಘಾತವೇ ಆಗಿತ್ತು. ಜತೆಗೆ ಅಷ್ಟು ದೊಡ್ಡ ಹುದ್ದೆಯಲ್ಲಿರುವವರು ಹೀಗೆ ವರ್ತಿಸಬಹುದೆಂಬುದೂ ತಮ್ಮನ್ನು ತಲ್ಲಣಗೊಳಿಸಿತ್ತು'' ಎಂಬ ರೂಪನ್ ಬಜಾಜ್ ಅವರ ನುಡಿ ಇಂದಿನ ದೇಶದ ವಾಸ್ತವ ಸತ್ಯವನ್ನು ಬಯಲಿಗೆಳೆಯುತ್ತದೆ. ಹೆಣ್ಣನ್ನು ಇನ್ನು ಸಮಾಜದಲ್ಲಿ ತುಚ್ಛವಾಗಿಯೇ ಕಾಣುವ ಪುರುಷಾಧಿಪತ್ಯದ ಮನಸ್ಸಿಗೆ, ಹೆಣ್ಣು ಯಾವ ಸ್ಥಾನವನ್ನೇ ಏರಲಿ ಗಂಡನ್ನು ಮೀರಿಸುವಂತೆಯೇ ಇಲ್ಲ. ಹೆಣ್ಣಿನ ಸ್ವತಂತ್ರ ವ್ಯಕ್ತಿತ್ವವನ್ನು , ಅವಳ ಅಧಿಕಾರವನ್ನು ಕಲ್ಪಿಸಿಕೊಳ್ಳುವದು, ಒಪ್ಪಿಕೊಳ್ಳುವುದು ಮತ್ತು ಗೌರವಿಸುವುದು ತುಂಬಾ ಕಷ್ಟದ ಸಂಗತಿಯಾಗಿದೆ. ಪೋಲಿಸ್ ಮುಖ್ಯಸ್ಥರೊಬ್ಬರು ತಮಗಿಂತ ಹಿರಿಯ ಮಹಿಳಾ ಅಧಿಕಾರಿಯೊಂದಿಗೆ ಅಸಭ್ಯವಾಗಿ ವರ್ತಿಸಿದ ಪ್ರಕರಣ ಮತ್ತು ಅದಕ್ಕಾಗಿ ಶಿಕ್ಷೆಗೆ ಗುರಿಯಾದದ್ದು ಭಾರತದ ಇತಿಹಾಸದಲ್ಲಿ ಕಪ್ಪು ಚುಕ್ಕೆಯಾಗಿ ಉಳಿಯುತ್ತದೆ. ರೂಪನ್ ಬಜಾಜ್‌ರವರಿಗೆ ತಂದೆ ಲೆಫ್ಟಿನೆಂಟ್ ಕರ್ನಲ್ ಇಕ್ಬಾಲ್ ಸಿಂಗ್ ಮತ್ತು ಐ.ಎ.ಎಸ್. ಅಧಿಕಾರಿ ಪತಿ ಭರತ್ ರಾಜ್ ಬಜಾಜ್‌ರ ಪೂರ್ಣ ಬೆಂಬಲವಿದ್ದುದರಿಂದ ಹೋರಾಡುವ ಶಕ್ತಿಗೆ ಬಲ ಬಂದಿತು. ಆದರೆ 'ಭಯೋತ್ಪಾದಕರ ಬೇಟೆಗಾರ, ಪಂಜಾಬ್‌ನ ಹೀರೋ' ಎನಿಸಿದ್ದ ಗಿಲ್ ವಿರುದ್ಧ ಸೆಣಸಾಡುವುದೇನೂ ಅಷ್ಟೊಂದು ಸುಲಭವಾಗಿರಲಿಲ್ಲ. ತಾನೇ 'ಪದ್ಮಶ್ರೀ' ನೀಡಿ ಸನ್ಮಾನಿಸಿದ್ದ ಪೋಲಿಸ್ ಅಧಿಕಾರಿಯನ್ನು ಸರಕಾರ ಅಷ್ಟೊಂದು ಸುಲಭವಾಗಿ ಬಿಟ್ಟು ಕೊಡಲು ಸಿದ್ಧರಿರಲಿಲ್ಲ. ಇಂತಹ ಪ್ರತಿಕೂಲ. ವಾತಾವರಣದಲ್ಲೂ ತಂದೆಯಿಂದ ಧನ ಸಹಾಯ, ತಮ್ಮ ಉಳಿತಾಯದ ಹಣ, ಬಿಡುವಿಲ್ಲದ ಕಛೇರಿಯ ಕೆಲಸದ ನಡುವೆಯೂ ಕೋರ್ಟು, ವಕೀಲರಿಗಾಗಿ ಓಡಾಟ-ಎಷ್ಟೊಂದು ಶ್ರಮದ ನಡುವೆ ರೂಪನ್ ಕಡೆಗೂ ಗೆದ್ದರು. ಆದರೆ ರೂಪನ್ ಪಟ್ಟ ಶ್ರಮಕ್ಕೆ ಹೋಲಿಸಿದರೆ ಗಿಲ್‌ಗೆ ಆದ ಶಿಕ್ಷೆ ಕಡಿಮೆಯೇ. ಸೆರೆಮನೆವಾಸದ ಶಿಕ್ಷೆಯೂ ಇಲ್ಲದೆ ದಂಡವಾಗಿ ತೆರಬೇಕಾದ 2 ಲಕ್ಷ ರೂ. ಹಣ ಹಿರಿಯ ಪೋಲಿಸ್ ಅಧಿಕಾರಿಗೆ ಕಷ್ಟದ ವಿಷಯವೇನಿಲ್ಲ. ಸಾಂಕೇತಿಕವಾಗಿ ಈ ಶಿಕ್ಷೆಯಿಂದ ಅವರಿಗೆ ಅವಮಾನವಾಗಿರಬಹುದು ಅಷ್ಟೆ.

ರೂಪನ್ ಬಜಾಜ್ ಪ್ರಕರಣ ನಮ್ಮ ಮುಂದೆ ಹಲವಾರು ಸತ್ಯ ಸಂಗತಿಗಳನ್ನು ಬಯಲಿಗಿಡುತ್ತದೆ. ರೂಪನ್ ಅಂತಹ ಹಿರಿಯ ಸರಕಾರಿ ಅಧಿಕಾರಿಯ ಮೇಲೂ ಲೈಂಗಿಕ ದೌರ್ಜನ್ಯ ನಡೆಯಬಹುದು ಮತ್ತು ಅಂತಹವರಿಗೂ ನ್ಯಾಯ ದೊರೆಯುವುದು ಎಂಥ ದುಬಾರಿಯ ಸಂಗತಿಯಾಗಿರುವಾಗ ಇನ್ನು ಸಾಮಾನ್ಯ ಮಹಿಳೆಯ ಪಾಡೇನು? ಬಡ ಸಾಥಿನ್ ಭಾಂವ್ರಿದೇವಿಯ ಮೇಲೆ ನಡೆದ ಅತ್ಯಾಚಾರ ನಡೆಸಿದ ಅಪರಾಧಿಗಳಿಗೇ ಇನ್ನೂ ಶಿಕ್ಷೆಯಾಗದೆ ನ್ಯಾಯದ ನಿರೀಕ್ಷೆಯಲ್ಲಿರುವಾಗ ರೂಪನ್‌ರವರ ಪ್ರಕರಣದ ತೀರ್ಪು ಬೇಗ ಬಂದಿದೆಯೆನ್ನಬಹುದು. ಆದರೂ ನಮ್ಮ ನ್ಯಾಯಾಂಗದ ನಿಧಾನ ನಡೆ ಮತ್ತು ಕಾರ್ಯ ವೈಖರಿಯಲ್ಲಿ ನಮ್ಮ ಹೆಣ್ಣುಮಕ್ಕಳು ವಿಶ್ವಾಸವಿಡುವುದು ಹೇಗೆ ? ಅನ್ಯಾಯ ವಿರುದ್ಧ ಹೋರಾಡುವ ಮಾನಸಿಕ ಸ್ಥೈರ್ಯ ಮತ್ತು ಆರ್ಥಿಕ ಸಬಲತೆಗಳೆರಡೂ ಇಲ್ಲದ ಸಂದರ್ಭದಲ್ಲಿ ನ್ಯಾಯ ಎಷ್ಟೊಂದು ದುಬಾರಿಯಾಗುತ್ತದಲ್ಲವೇ ? ದುಡಿಯುವ ಸ್ಥಳಗಳಲ್ಲಿ ಘನತೆಯಿಂದ ಕಾರ್ಯನಿರ್ವಹಿಸುವ ವ್ಯವಸ್ಥೆಯನ್ನು ಉಂಟು ಮಾಡುವ ಹೊಣೆ ಸಮಾಜದ್ದು ಮತ್ತು ಅಂತಹ ಸ್ಥಿತಿಯಿಲ್ಲದಾಗ ನ್ಯಾಯಾಂಗ ಅತ್ಯಂತ ಸರಳವಾಗಿ ಮತ್ತು ಶೀಘ್ರವಾಗಿ ಹೆಣ್ಣಿಗೆ ನ್ಯಾಯ ದೊರಕಿಸುವಂತೆ ಎಲ್ಲರೂ ಒತ್ತಾಯಿಸಬೇಕಾಗಿದೆ.

- ಎನ್. ಗಾಯತ್ರಿ

‘ಹಸೀನಾ’ ಎತ್ತುವ ಪ್ರಶ್ನೆಗಳು



ಇತ್ತೀಚೆಗೆ ಸುದ್ದಿಯಲ್ಲಿದ್ದ ಇಮ್ರಾನ್‌ಳ ಪ್ರಸಂಗ, ಅದಕ್ಕೆ ಹೊಂದಿಕೊಂಡಂತೆ ಮುಸ್ಲಿಂ ವೈಯಕ್ತಿಕ ಕಾನೂನಿನ ಹಲವು ಮುಖಗಳ ಚರ್ಚೆ ಈ ಹಿನ್ನೆಲೆಯಲ್ಲಿ ಇತ್ತೀಚೆಗೆ ‘ಹಸೀನಾ’ ಚಿತ್ರ ನೋಡುವ ಅವಕಾಶ ದೊರೆತಾಗ ಇದು ಕೂಡ ಮುಸ್ಲಿಂ ಹೆಣ್ಣಿನ ನೋವಿನ ವ್ಯಾಖ್ಯಾನವೇ ಆಗಿರಬಹುದು ಎಂಬ ಅಂಶ ಆರಂಭದಲ್ಲಿ ಅನಿಸಿದ್ದು ಸಹಜ. ಆದರೆ ಚಿತ್ರ ಮುಗಿಯುವ ವೇಳೆಗೆ ‘ಹಸೀನಾ’ ಕೇವಲ ಮುಸ್ಲಿಂ ಹೆಣ್ಣಿನ ಸಮಸ್ಯೆಯನ್ನು ಮಾತ್ರ ಪ್ರತಿನಿಧಿಸದೇ, ನಮ್ಮ ಸಮಾಜದ ಯಾವುದೇ ಧರ್ಮಕ್ಕೂ ಸೇರಿರಬಹುದಾದ ಹೆಣ್ಣಿನ ನೋವಿನ ಕತೆಯನ್ನು ಮತ್ತು ಅದನ್ನು ಪ್ರತಿಭಟಿಸುವ ವಿಶಿಷ್ಟ ಶೈಲಿಯನ್ನು ಪ್ರಕಟಿಸುತ್ತದೆ. ಕತೆಗಾರ್ತಿ ಬಾನು ಮುಷ್ತಾಕ್‌ರವರ ‘ಕರಿನಾಗರಗಳು’ ಕತೆಯ ಮೂಲದ್ರವ್ಯದಿಂದ ವಿಸ್ತಾರವಾದ ಕಥಾ ಹಂದರವನ್ನು ಪಡೆದುಕೊಂಡಿರುವ ‘ಹಸೀನಾ’ ಅನಕ್ಷರಸ್ಥ ಬಡ ಹೆಣ್ಣು ಮಗಳೊಬ್ಬಳು ಹೆಣ್ಣಾಗಿಯೇ ಹುಟ್ಟಿದ್ದಕ್ಕಾಗಿ ಮತ್ತು ಹೆಣ್ಣು ಮಕ್ಕಳನ್ನು ಮಾತ್ರ ಹೆತ್ತದ್ದಕ್ಕಾಗಿ ನೋವಿನ ಸರಮಾಲೆಯೊಳಗೆ ಸಿಕ್ಕಿಕೊಳ್ಳುವ ಮತ್ತು ಈ ನೋವಿಗೆ ಕಾರಣನಾದ ಗಂಡನ ವಿರುದ್ಧ ಪ್ರತಿಭಟಿಸುವ ಕತೆಯಾಗಿದೆ. ಹಸೀನಾಳ ಪ್ರತಿಭಟನೆ ಕೌಟುಂಬಿಕ ವಲಯದೊಳಗೆ ನಡೆಯುವ ಪ್ರತಿಭಟನೆ ಮಾತ್ರವಾಗದೆ ಇಡೀ ವ್ಯವಸ್ಥೆಯ ವಿರುದ್ಧದ ಪ್ರತಿಭಟನೆಯೂ ಆಗಿ ಆರ್ಥಿಕ, ಸಾಮಾಜಿಕ, ರಾಜಕೀಯ ಆಯಾಮಗಳನ್ನು ಒಳಗೊಳ್ಳುವುದು ಚಿತ್ರದ ಗೆಲುವುಗಳಲ್ಲಿ ಒಂದು.

ಇಡೀ ಚಿತ್ರವು ಎರಡು ಮುಖ್ಯ ಸಂಗತಿಗಳನ್ನು ಪ್ರಕಟಿಸುವಲ್ಲಿ ಸಮರ್ಥವಾಗಿದೆ. ಮೊದಲನೆಯದಾಗಿ ಲಿಂಗ ದೌರ್ಜನ್ಯವನ್ನು ಅದರ ವರ್ಗ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳಲ್ಲಿ ವಿಶ್ಲೇಷಿಸುವ ಪ್ರಯತ್ನ, ಹಸೀನಾಳಂತೆ, ಮುತವಲ್ಲಿಯ ಮಡದಿ ಮತ್ತು ಶ್ರೀಮಂತ ತರುಣಿ ಜುಲೇಕಾರೂ ನೋವಿನ ವಿವಿಧ ಮಗ್ಗುಲಗಳ ಪರಿಚಯ ಪಡೆದವರೇ. ಬಡತನ, ಅನಕ್ಷರತೆ, ಲಿಂಗಬೇಧ - ಇವೂ ಮೂರೂ ಒಟ್ಟಾಗಿ ಸೇರಿದಾಗ ಹೆಣ್ಣಿನ ಬದುಕು ದುರಂತಮಯವಾಗಬಹುದು - ಎನ್ನುವುದನ್ನು ಚರ್ಚಿಸುವ ಈ ಚಿತ್ರ, ಆ ವಿವಿಧ ಹೆಣ್ಣುಗಳ ಬಿಡುಗಡೆಯ ಆಕಾಂಕ್ಷೆ ಮತ್ತು ಹೋರಾಟ ಕೂಡ ವಿಭಿನ್ನವಾದದ್ದು ಎಂಬುದನ್ನು ಸಾಥರಕವಾಗಿ ನಿರೂಪಿಸುತ್ತದೆ. ಗಂಡನಿಂದ ಬೇರ್ಪಟ್ಟಿದ್ದರೂ ಶ್ರೀಮಂತ ತರುಣಿ ಜುಲೇಕಾಳಿಗೆ ಹಸೀನಾ ಎದುರಿಸುತ್ತಿರುವ ಸಮಸ್ಯೆಗಳಿಲ್ಲ, ಪುಸ್ತಕಗಳನ್ನು ಓದುವುದರಲ್ಲಿ ಸಮಯ ಕಳೆಯುತ್ತಾ ಪಾರ್ಟಿ, ಸಮಾರಂಭಗಳಲ್ಲಿ ಭಾಗವಹಿಸುತ್ತಾ ಸಂತೋಷವಾಗಿರಬಲ್ಲಳು. ಕೊರಾನ್, ಶರೀಯತ್‌ಗಳ ಜ್ಞಾನ ಪಡೆದಿರುವ ಅವಳ ಬಗ್ಗೆ ಮೌಲ್ವಿ, ಮುತವಲಿಗಳಿಗೆ ಅಸಮಾಧಾನವಿದ್ದರೂ ಅವಳನ್ನು ಶಿಕ್ಷಿಸಲಾರರು. ಹಾಗೆಯೇ ಮುತವಲಿ ಮಡದಿಗೆ ಬಡತನದ ಬೇಗೆಯಿರದಿದ್ದರೂ ಮಕ್ಕಳನ್ನು ಹೆತ್ತು ಹೆತ್ತು ಹೆರಿಗೆಯ ಯಂತ್ರವಾಗಿರುವುದಕ್ಕೆ ಬೇಸರವಿದೆ. ತಾನು ಆಪರೇಷನ್ ಮಾಡಿಸಿಕೊಳ್ಳಬೇಕೆನಿಸಿದರೂ ಗಂಡನ ಅಸಮ್ಮತಿ ಅವಳಿಗೆ ಸಿಟ್ಟು ಬರಿಸಿದೆ. ಇನ್ನು ಆಟೋಚಾಲಕ ಯಾಕೂಬ್‌ನ ಮಡದಿ ಹಸೀನಾ ಗಂಡನ ಪ್ರೀತಿ ಗಳಿಸಿದವಳು. ಮೂವರು ಹೆಣ್ಣುಮಕ್ಕಳ ತಾಯಿಯಾದ ಹಸೀನಾ ಮತ್ತೊಮ್ಮೆ ಗರ್ಭಿಣಿ ಕೂಡ. ಬರುವ ನಾಲ್ಕನೆಯ ಮಗು ಗಂಡಾಗಲಿ ಎಂಬುದು ಎಲ್ಲರ ಆಸೆ. ಜಾತ್ರೆಗೆ ಹೋಗಿ ಕೂಸು ಹುಟ್ಟುವುದಕ್ಕೆ ಮುನ್ನ ಯಾಕುಬ್ ಕುಲಾವಿ ಕೊಂಡೂ ಆಗಿದೆ. ಆ ಕುಲಾವಿ ತೊಡುವ ಸರದಾರ ಭೂಮಿಗಿಳಿಯುವುದನ್ನು ನೋಡುವವರೆಗೂ ತಾಳ್ಮೆಯಿಲ್ಲದೆ ಅವನು ಭ್ರೂಣದ ಲಿಂಗ ಪರೀಕ್ಷೆ ಮಾಡಿಸಲು ವೈದ್ಯರ ಬಳಿಗೆ ಹೋಗುತ್ತಾನೆ. ಹುಟ್ಟುವ ಮಗು ‘ಹೆಣ್ಣು’ ಎಂದು ವೈದ್ಯರು ತಿಳಿಸಿದ್ದೇ ತಡ ಹಸೀನಾಳ ‘ನಸೀಬು’ ಬದಲಾಗುತ್ತದೆ. ಯಾಕೂಬ್‌ನಿಗೆ ಗಂಡು ಮಗು ಹುಟ್ಟಿಸಲಾರದ ಹಸೀನಾ ಬೇಡವೆನಿಸುವುದರ ಜೊತೆಗೆ ಅವಳ ಉಳಿದ ಹೆಣ್ಣು ಮಕ್ಕಳೂ ಬೇಡವಾಗುತ್ತಾರೆ. ಒಟ್ಟಾರೆ ಹೆಣ್ಣಾಗಿ ಹುಟ್ಟುವ ಮತ್ತು ಹೆಣ್ಣನ್ನು ಹುಟ್ಟಿಸುವ ಕ್ರಿಯೆಯೇ ಸಾಮಾಜಿಕ ದೌರ್ಜನ್ಯದ ಮೂಲವಾಗಿದೆಯೆಂಬುದನ್ನು ಈ ಚಿತ್ರವು ಬಹು ಸಮರ್ಥವಾಗಿ ಚಿತ್ರಿಸಿದೆ.

ಹೆಣ್ಣಿನ ಪ್ರತಿಭಟನೆಯ ತಾತ್ವಿಕ ಮೂಲ ಮತ್ತು ಸ್ವರೂಪವನ್ನು ಕುರಿತಂತೆ ಈ ಚಿತ್ರ ಎತ್ತುವ ಪ್ರಶ್ನೆಗಳು ಕುತೂಹಲಕಾರಿಯಾದುದು.

ಆಟೋಚಾಲಕನ ಮಡದಿ ಹಸೀನಾ ನ್ಯಾಯಕೇಳಲು ಮಸೀದಿಯ ಮುಂದೆ ಧರಣಿ ಕುಳಿತಿರುವ ದೃಶ್ಯದೊಂದಿಗೆ ಚಿತ್ರ ಆರಂಭವಾಗುತ್ತದೆ. ಅವಳ ಆ ಪ್ರತಿಭಟನೆಯ ಸುದ್ದಿ ಕೇಳಿ ಕೆಲವರಿಗೆ ಆತಂಕವಾಗುತ್ತದೆ. ಕೆಲವರಿಗೆ ತಿರಸ್ಕಾರ. ಇಡೀ ಚಿತ್ರದಲ್ಲಿ ಹಸೀನಾ ಹಲವು ಬಾರಿ ನಡೆಸುವ ಇಂತಹ ಧರಣಿಗಳು ಮತ್ತು ನೀಡುವ ಅರ್ಜಿ, ಮನವಿಗಳು ಕ್ರಮೇಣ ಬೆಳೆಯುತ್ತಾ ಹೋಗಿ ಒಟ್ಟಾಗಿ ‘ಹಸೀನಾ’ಳ ಹೋರಾಟದ ಸ್ವರೂಪವನ್ನು ಕಟ್ಟಿಕೊಡುತ್ತದೆ. ಇಲ್ಲಿ ಹಸೀನಾಳದು ಒಂಟಿ ಹೆಣ್ಣಿನ ಪ್ರತಿಭಟನೆ ಮತ್ತು ಅದಕ್ಕೆ ಯಾವುದೇ

ತಾತ್ವಿಕ ಬೆನ್ನೆಲುಬಾಗಲಿ ಇಲ್ಲ. ಅಷ್ಟೇ ಅಲ್ಲ, ಯಾವ ಸ್ಫೂರ್ತಿ, ಮಾರ್ಗದರ್ಶನಗಳೂ ಇಲ್ಲ. ಅನಕ್ಷರಸ್ಥ ಹಸೀನಾಳಿಗೆ ಅವಳ ಮನೆಗೆಲಸದ ಯಜಮಾನಿ ಜುಲೇಕಾ ಬರೆದುಕೊಡುವ ಮನವಿ ಪತ್ರಗಳು ಮತ್ತು ಚರ್ಚಿಸುವ ವಿಚಾರಗಳ ಬೆಂಬಲವನ್ನು ಬಿಟ್ಟರೆ, ಅವಳ ಕಾರ್ಯವನ್ನು ಭೇಷ್ ಎಂದು ಹೇಳಿ ಅವಳಿಗೆ ದಾರಿ ತೋರುವವರಿಲ್ಲ. ಮೊದಲಿಗೆ ಮನೆ ಬಿಟ್ಟು ಹೋದ ಗಂಡನ ಬಗ್ಗೆ ಸಿಟ್ಟು ಹಸೀನಾಳಿಗಿದ್ದರೂ, ಅವಳ ಪ್ರತಿಭಟನೆಯ ಗತಿ ಬೆಳೆಯುತ್ತಿದ್ದಂತೆ ಅವಳಿಗೆ ಗಂಡ ಬೇಕಿಲ್ಲ. ಮತ್ತೊಮ್ಮೆ ನಿಖಾ ಮಾಡಿಕೊಂಡರೂ ಸರಿ, ಆದರೆ ಅವನು ತನ್ನ ಕುಟುಂಬಕ್ಕೆ ಮತ್ತು ಅಂಧ ಮಗಳ ಆರೈಕೆಗೆ ಅಗತ್ಯವಾದ ಮೆಹರ್ ಹಣ ಕೊಟ್ಟು ಬಿಟ್ಟರೆ ಸಾಕು ಅನ್ನುವ ತೀರ್ಮಾನಕ್ಕೆ ಬರುತ್ತಾಳೆ. ಗಂಡನಿಂದ ತಲಾಖ್' ಕೇಳುವುದು ಅವಳಿಗೆ ನೋವಿನ ಸಂಗತಿಯಾಗುವುದಿಲ್ಲ. ಬದಲಿಗೆ, ಮೆಹರ್ ದೊರಕಿಸುವ ವ್ಯವಸ್ಥೆಯಾಗುತ್ತದೆಂಬ ಮಾತೆಯ ಸಂತಸ ಅವಳಿಗೆ. ಇಲ್ಲಿ ಹಸೀನಾ ಧಾರ್ಮಿಕ ಮತ್ತು ಸಾಮಾಜಿಕ ವ್ಯವಸ್ಥೆಯಿಂದ ನಿರೀಕ್ಷಿಸುವ ನ್ಯಾಯ ಇಷ್ಟೆಯೇ. ಕೇವಲ ಆರ್ಥಿಕವಾದದ್ದು.

ಹಸೀನಾಳಿಗೆ ಉಂಟಾಗಿರುವ ಅನ್ಯಾಯಕ್ಕಾಗಿ ಸ್ವಲ್ಪವೂ ಸ್ಪಂದಿಸದ ಮುತವಲ್ಲಿ ಅವಳ ಗಂಡನೊಂದಿಗೆ ಕೈ ಜೋಡಿಸುವುದು ಧಾರ್ಮಿಕ ವ್ಯವಸ್ಥೆಯ ನೈತಿಕತೆಯ ವ್ಯಂಗ್ಯವಾಗುತ್ತದೆ. ಹಾಗೆಯೇ ಮಾಜಿ ಮುತವಲ್ಲಿ ಕೂಡ ಅವಳ ಬಗ್ಗೆ ಅನುಕಂಪದ ದೃಷ್ಟಿ ಬೀರುವಂತೆ ನಾಟಕವಾಡುವುದು ತನ್ನ ಹುದ್ದೆ ವಾಪಸ್ಸು ಪಡೆಯುವ ರಾಜಕೀಯದಾಟದಿಂದ. ಹೀಗೆ ಹೆಣ್ಣಿನ ನೋವು ಮತ್ತು ಅಸಹಾಯಕತೆ ಧರ್ಮಾಧಿಕಾರಿಗಳ ರಾಜಕೀಯ ಚದುರಂಗದ ದಾಳವಾಗುತ್ತದೆ. ತಾನು ಕಷ್ಟಪಟ್ಟು ಸಂಪಾದಿಸಿದ ಹಣವನ್ನೂ ಗಂಡ ಕಿತ್ತುಕೊಂಡು ಬಡಿದು ಹೋದಾಗ ರೋಸಿ ಹೋಗುವ ಹಸೀನಾ ಮಸೀದಿಯ ಮುಂದೆ ಶಾಶ್ವತವಾಗಿ ಧರಣಿ ಕೂಡುತ್ತಾಳೆ. ಹಗಲೆಲ್ಲ ಮುಗಿದು ರಾತ್ರಿ ಕಳೆದರೂ ಕುಳಿತಲ್ಲಿಂದ ಏಳದೆ ಪ್ರತಿಭಟಿಸುವ ಹಸೀನಾಳ ಛಲಕ್ಕೆ ಮೌಲ್ವಿಗಳೂ ಸುಸ್ತಾಗುತ್ತಾರೆ. ಆದರೆ ಕುಡಿದು ಬಂದ ಗಂಡ ಧಾರ್ಮಿಕ ಮುಖಂಡರ ಸುಮ್ಮುಖದಲ್ಲೇ ಅವಳನ್ನು ಚಚ್ಚುತ್ತಾನೆ. ಅಪ್ಪನನ್ನು ತಡೆಯಲು ಬಂದ ಕುರುಡಿ ಮಗಳು ಅವನ ಏಟಿನ ಪೆಟ್ಟಿಗೆ ಬಲಿಯಾಗಿ ಅಸು ನೀಗುತ್ತಾಳೆ. ಆ ಮಗುವಿನ ಸಾವು ಮುತಾವಲ್ಲಿಯ ಮನಶ್ಶಾಂತಿಯನ್ನು ಕದಡುತ್ತದೆ. ಹಸೀನಾಳ ಮನೆಗೇ ಬಂದು ಸಂತಾಪ ಸೂಚಿಸಿ ಪಶ್ಚಾತ್ತಾಪ ವ್ಯಕ್ತಪಡಿಸುತ್ತಾನೆ.

ಗಂಡನಿಂದ ಅನ್ಯಾಯವಾದದ್ದನ್ನು ಸಾತ್ವಿಕವಾಗಿ ಹೋರಾಡುತ್ತಾ ಪ್ರತಿಭಟಿಸುವ ಹಸೀನಾಳಿಗೆ ಮಗಳ ಸಾವು ಮತ್ತೂ ಘೋರ ಅನ್ಯಾಯವಾದಂತಾಗುತ್ತದೆ. ಆವಳ ಇಡೀ ಹೋರಾಟವೇ ಕುರುಡ ಮಗಳಿಗೆ ಕಣ್ಣು ದೊರಕಿಸುವ ಪ್ರಯತ್ನವಾಗಿರುತ್ತದೆ. ಚಿತ್ರದ ಕೊನೆಯಲ್ಲಿ ಮುತಾವಲ್ಲಿ ಅವಳ ಮನೆಗೆ ಬಂದು ಅವಳಿಗೆ ಹಣ ಕೊಡಿಸಿ ನ್ಯಾಯ ದೊರಕಿಸುವುದಾಗಿ ಹೇಳಿದರೆ, ಅದನ್ನು ನಿರಾಕರಿಸುವ ಹಸೀನಾ, ತಾನು ಕಳೆದುಕೊಂಡದ್ದನ್ನು ಯಾರೂ ಹಿಂದೆ ಕೊಡಿಸಲಾರಿರಿ ಎಂದು ತನ್ನ ಹೋರಾಟದ ಪ್ರಾಮಾಣಿಕತೆಯನ್ನು ಮತ್ತೊಮ್ಮೆ ಮೆರೆಯುತ್ತಾಳೆ.

ಚಿತ್ರದ ಕೊನೆಯಲ್ಲಿ ಗಂಡನ ದೌರ್ಜನ್ಯಕ್ಕೆ ತುತ್ತಾದ ಮಗಳು ತೊಡೆಯ ಮೇಲೆ ಸಾವನ್ನಪ್ಪಿದ ನಂತರ, ಹಸೀನಾ ತನ್ನ ಕೈಯಲ್ಲಿದ್ದ ಚೀಟಿಗಳನ್ನು ಗಾಳಿಗೆ ತೂರುತ್ತಾಳೆ. ಅದು ಅಲ್ಲಿನ ಸುತ್ತಮುತ್ತಲಿನ ಮನೆಯ ಅಂಗಳದಲ್ಲಿ ಬಿದ್ದು ಹೆಂಗಳೆಯರ ಓದಿಗೆ ವಸ್ತುವಾಗುತ್ತದೆ. ಅವಳ ಕೈಯಲ್ಲಿದ್ದ ಕಾಗದಗಳೆಲ್ಲಾ ಹಸೀನಾ ಧಾರ್ಮಿಕ ಮುಖಂಡರನ್ನು ಕೇಳಬೇಕೆಂದಿದ್ದ ನೂರಾರು ಪ್ರಶ್ನೆಗಳು. ಕೊನೆಯಲ್ಲಿ ಹಸೀನಾಳ ದುಃಖ ಹಂಚಿಕೊಳ್ಳಲು ಮಹಿಳೆಯರ ಸಮುದಾಯವು ಕಪ್ಪು ವಸ್ತ್ರ ಧರಿಸಿ ಬರುವ ದೃಶ್ಯವೊಂದಿದೆ. ಈ ಒಂದು ದೃಶ್ಯ ತುಂಬಾ ನಾಟಕೀಯವೆನಿಸಿ, ಹೆಣ್ಣಿನ ಸಮಸ್ಯೆಯನ್ನು ರೋಚಕಗೊಳಿಸಿರುವಂತೆ ತೋರುತ್ತದೆ. ಅದೇನೇ ಇರಲಿ ಹಸೀನಾಳ ಮೌನ ಪ್ರತಿಭಟನೆ ಮತ್ತು ಅವಳಿಗುಂಟಾದ ಅನ್ಯಾಯವನ್ನು ಹಂಚಿಕೊಳ್ಳುವ ಹಂತಕ್ಕೆ ಇಡೀ ಚಿತ್ರ ಬೆಳೆಯುವ ಗತಿಯನ್ನು ಹೊಂದಿರುವುದು ಚಿತ್ರದ ಇತ್ಯಾತ್ಮಕ ಗುಣವಾಗಿದೆ. ಮಕ್ಕಳಾಗದಂತೆ ತಾನು ಆಪರೇಷನ್ ಮಾಡಿಸಿಕೊಳ್ಳುತ್ತೇನೆ, ಎಂದು ವಿನಂತಿಸಿಕೊಳ್ಳುತ್ತಿದ್ದ ಮುತವಲ್ಲಿಯ ಹೆಂಡತಿ ಗಂಡನ ಅನುಮತಿಯನ್ನು ಕೇಳದೆ ವಿಷಯ ತಿಳಿಸಿ ತಾಯಿಯ ಮನೆಗೆ ಹೋಗುವುದು ಚಿತ್ರದ ಪ್ರಮುಖ ಅಂಶ. ಹಾದಿ ಬೀದಿಯಲ್ಲಿ ಧಾರ್ಮಿಕ ಮುಖಂಡರು ನಡೆದಾಡುವಾಗ ಅಪಾರ ಗೌರವ ತೋರಿಸುತ್ತಿದ್ದ ಜನಸಾಮಾನ್ಯರು, ವಿಶೇಷವಾಗಿ ಸ್ತ್ರೀಯರು ಹಸೀನಾಳ ಪ್ರಸಂಗದ ನಂತರ ಮುಖಂಡರ ಅಸ್ತಿತ್ವವನ್ನು ನಿರಾಕರಿಸುವುದು ಒಟ್ಟಾರೆಯಾಗಿ ಒಂದು ಸಾತ್ವಿಕ ಪ್ರತಿಭಟನೆ ಗಳಿಸಿದ ವಿಜಯವಾಗುತ್ತದೆ.

ಗಿರೀಶ್ ಕಾಸರವಳ್ಳಿಯವರು ಎಂದಿನಂತೆ ಈ ಚಿತ್ರದಲ್ಲೂ ಪಾತ್ರಗಳಿಗೆ ಸೂಕ್ತರಾದವರನ್ನು ಆಯ್ಕೆ ಮಾಡಿದ್ದಾರೆ. 'ಮುನ್ನುಡಿ' ಚಿತ್ರದಲ್ಲಿ ಮುಸ್ಲಿಂ ತರುಣಿಯಾಗಿ ಈಗಾಗಲೇ ಅದ್ಭುತ ಅಭಿನಯ ನೀಡಿದ್ದ ತಾರಾ ಈ ಚಿತ್ರದಲ್ಲೂ ಅಭಿನಯದ ಪ್ರಬುದ್ಧತೆಯನ್ನು ತೋರಿದ್ದಾರೆ. ಕುರುಡಿ ಮತ್ತು ಚಿಕ್ಕ ಹೆಣ್ಣು ಮಕ್ಕಳು, ಧಾರ್ಮಿಕ ಮುಖಂಡರುಗಳು ಎಲ್ಲರೂ ಪರಿಸರಕ್ಕೆ ತಕ್ಕಂತೆ ಅಭಿನಯಿಸಿದ್ದಾರೆ. ಉತ್ತಮ ಪ್ರಸಾಧನ, ಉಡುಗೆ-ತೊಡುಗೆ ಚಿತ್ರಕ್ಕೆ ಕಳೆಕೊಟ್ಟಿದೆ. ಉರ್ದು ಮಿಶ್ರಿತ ಕನ್ನಡ ಸಂಭಾಷಣೆಗಳು ಉಪಶೀರ್ಷಿಕೆಗಳೊಂದಿಗೆ ಚಿತ್ರವನ್ನು ಸವಿಯುವುದಕ್ಕೆ ತೊಂದರೆ ಕೊಡುತ್ತದೆ. ಅದೇನೇ 'ಹಸೀನಾ' ಚಿತ್ರದ ಮೂಲಕ ಮಹಿಳಾ ಪ್ರತಿಭಟನೆಯ ಆಯಾಮಗಳ ಬಗ್ಗೆ ಚಿಂತಿಸುವಂತೆ ಮಾಡಲು ಗಿರೀಶ್ ಕಾಸರವಳ್ಳಿಯವರು ಅನುವು ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ಅವರಿಗೆ 'ಅಚಲ'ದ ಅಭಿನಂದನೆಗಳು. □□

ಪುರುಷ ರಾಜಕಾರಣದ ಅನಾವರಣ

- ಗೌರಿ



'ಜಯ' - ಕಾದಂಬರಿ
ಲೇಖಕಿ : **ಡಾ|| ಎಂ.ಎಸ್. ವೇದಾ**
ಪುಟಗಳು - 304
ಪ್ರಕಾಶಕರು : ಸಂವಹನ,
ಇವನ್ನಿಂಗ್ ಬಜಾರ್ ಹಿಂಭಾಗ, ಶಿವರಾಮ ಪೇಟೆ
ಮೈಸೂರು. (2004)

ಕವಯಿತ್ರಿ ಮತ್ತು ಕತೆಗಾರ್ತಿಯಾಗಿ ಕನ್ನಡ ಸಾಹಿತ್ಯ ಲೋಕದಲ್ಲಿ ಚಿರಪರಿಚಿತರಾಗಿರುವ ಎಂ.ಎಸ್. ವೇದಾ, ತಮ್ಮ 'ಜಮೀನು' ಕಾದಂಬರಿಯ ಮೂಲಕ ಕಾದಂಬರಿ ಲೋಕಕ್ಕೂ ಕಾಲಿರಿಸಿದವರು. ಈ ಎಲ್ಲ ಬರವಣಿಗೆಗಳಲ್ಲಿ ತಮ್ಮದೇ ವಿಶಿಷ್ಟವಾದ ಮಣ್ಣಿನ ಭಾಷೆಯಿಂದ ನಮಗೆ ಪರಿಚಿತರಾಗಿದ್ದ ವೇದಾ, ಇತ್ತೀಚಿನ ಅವರ ಹೊಸ ಕಾದಂಬರಿ 'ಜಯ'ದಲ್ಲಿ ಭಿನ್ನವಾದ ಭಾಷೆ ಮತ್ತು ಅನುಭವಗಳೊಂದಿಗೆ ಹೊಸತನ್ನು ನೀಡಿದ್ದಾರೆ.

ರಾಮಾಯಣ, ಮಹಾಭಾರತದ ಕಥೆಗಳ ಪುರಾಣಭಂಜನ ಮಾಡಿ ಸಮಕಾಲೀನ ನೆಲೆಯಲ್ಲಿ ಹೊಸ ವಾಸ್ತವದ ದೃಷ್ಟಿಕೋನದಿಂದ ಕಾದಂಬರಿಗಳನ್ನಾಗಿ ರಚಿಸುವ ಪ್ರಯತ್ನ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಈಗಾಗಲೇ ನಡೆದಿದೆ. ವಿಶೇಷವಾಗಿ ಎಸ್.ಎಲ್. ಭೈರಪ್ಪನವರ 'ಪರ್ವ' ಮತ್ತು ಹೆಚ್.ವಿ. ಸಾವಿತ್ರಮ್ಮನವರ 'ಸೀತೆ, ರಾಮ, ರಾವಣ' ಮತ್ತು 'ವಿಮುಕ್ತಿ'ಯನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. ಈ ಸಾಲಿಗೇ ಸೇರುವ ಮತ್ತೊಂದು ಕೃತಿ ವೇದಾರವರ ವಿಜಯ. ರಾಮಾಯಣ, ಮಹಾಭಾರತದ ಬಿಡಿ ಬಿಡಿ ಸ್ತ್ರೀ ಪಾತ್ರಗಳನ್ನು ಸ್ತ್ರೀವಾದಿ ದೃಷ್ಟಿಕೋನದಿಂದ ಪುನರ್‌ರಚಿಸಿ ಕಾದಂಬರಿಯಾಗಿಸುವ ಪ್ರಯತ್ನ ಕನ್ನಡದಲ್ಲಿ ಕಳೆದ ದಶಕದಲ್ಲಿ ವಿಪುಲವಾಗಿ ನಡೆದಿದೆ. ಆದರೆ ಹೆಚ್.ವಿ. ಸಾವಿತ್ರಮ್ಮ ಮತ್ತು ಭೈರಪ್ಪನವರು ರಾಮಾಯಣ, ಮಹಾಭಾರತವನ್ನು ಇಡಿಯಾಗಿ ಹೊಸ ದೃಷ್ಟಿಕೋನದಿಂದ ಪುನರ್‌ರಚಿಸಿದ್ದಾರೆ. ಇದೇ ಜಾಡಿನಲ್ಲಿ ಸಾಗಿರುವ ವೇದಾ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸ್ಪಷ್ಟ ತಾತ್ವಿಕ ನಿಲುವಿನೊಂದಿಗೆ ಮಹಾಭಾರತವನ್ನು ವಿಶ್ಲೇಷಿಸಿರುವುದು ಒಂದು ಗಮನಾರ್ಹ ಪ್ರಯತ್ನವಾಗಿದೆ.

ಇಂದು ವಿಶ್ವದಲ್ಲೆಲ್ಲಾ ಯುದ್ಧದ ಛಾಯೆ ದಟ್ಟವಾಗಿದೆ. ಜಗತ್ತಿನ ಹಿರಿಯಣ್ಣರ ಅಹಂಕಾರದಿಂದಾಗಿ ಆಫ್ಘಾನಿಸ್ತಾನ, ಇರಾಕ್ ಈಗಾಗಲೇ ತತ್ತರಿಸಿ ಹೋಗಿವೆ. ಇಂತಹ ಸಂದರ್ಭದಲ್ಲಿ ಮಹಾಭಾರತದ ಹದಿನೆಂಟು ದಿನಗಳ ಕಾಲ ನಡೆದ ಯುದ್ಧವನ್ನು ಹಿನ್ನೆಲೆಯಾಗಿಟ್ಟುಕೊಂಡು ಯುದ್ಧ ಮೀಮಾಂಸೆಯನ್ನು ತಮ್ಮ ಕಾದಂಬರಿಯಲ್ಲಿ ಚರ್ಚಿಸುವ ಸೃಜನಶೀಲತೆಯನ್ನು ವೇದಾ ತಮ್ಮ 'ಜಯ' ಕಾದಂಬರಿಯಲ್ಲಿ ನಡೆಸುತ್ತಾರೆ. 'ಕುರುಕ್ಷೇತ್ರ ಯುದ್ಧದ ಮೊದಲನೆಯ ದಿನದಿಂದ ಪ್ರಾರಂಭವಾಗಿ, 18 ದಿನಗಳ ಯುದ್ಧವನ್ನು 18 ಅಧ್ಯಾಯಗಳಲ್ಲಿ ನಿರೂಪಿಸುವ ಮತ್ತು ಸೂಕ್ತ ಹಿನ್ನೋಟಗಳ ಮೂಲಕ ಇಡೀ ಮಹಾಭಾರತದ ಕಥೆಯನ್ನು ಕಟ್ಟಿಕೊಡುವ ಈ ಕಾದಂಬರಿ ಅಭಿಜಾತ ಹಾಗೂ ಶಿಷ್ಟ ಮಹಾಭಾರತಗಳು ಮಾನ್ಯ ಮಾಡುವ ವೈಚಾರಿಕತೆಯನ್ನು ಮತ್ತು ಮೌಲ್ಯಗಳನ್ನು ಪ್ರಶ್ನಿಸುತ್ತದೆ, ಅವುಗಳ ಪುನರ್ಮೌಲ್ಯೀಕರಣ ಮಾಡುತ್ತದೆ. ಮುಖ್ಯವಾಗಿ ಸ್ತ್ರೀವಾದಿ ಪರಿಪ್ರೇಕ್ಷ್ಯದಿಂದ ನಿರೂಪಿಸಲ್ಪಟ್ಟಿರುವ ಈ ಕಾದಂಬರಿ ವೈಚಾರಿಕ ನೆಲೆಯಲ್ಲಿ ಎತ್ತುವ

ಮಹತ್ವದ ಪ್ರಶ್ನೆಯೆಂದರೆ, ಅಪಾರ ಸಾವು-ನೋವುಗಳಲ್ಲಿ ಕೊನೆಗಾಣುವ ಕುರುಕ್ಷೇತ್ರ ಯುದ್ಧಕ್ಕೆ ಕಾರಣರಾರು? ದ್ರೌಪದಿ ? ಕೃಷ್ಣ? ದುರ್ಯೋಧನ? ಇವರೆಲ್ಲರ ವ್ಯಕ್ತಿತ್ವ ಮತ್ತು ವರ್ತನೆಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸುತ್ತಾ ಕೊನೆಗೆ ಕಾದಂಬರಿ ನೀಡುವ ಉತ್ತರವೆಂದರೆ 'ಕುರುಕ್ಷೇತ್ರ ಯುದ್ಧಕ್ಕೆ ನಿಜವಾದ ಕಾರಣ ಪುರುಷ ರಾಜಕಾರಣ. ಆಧುನಿಕ ಸ್ತ್ರೀವಾದಿ ಕೇಟ್ ಮಿಲೆಟ್ ರೂಪಿಸುವ 'ಲೈಂಗಿಕ ರಾಜಕಾರಣ' ಎಂಬ ಪರಿಕಲ್ಪನೆಗೆ ಸಂವಾದಿಯಾಗಿರುವ 'ಪುರುಷ ರಾಜಕಾರಣ' ಎಂಬ ಪರಿಕಲ್ಪನೆಯ ಮೂಲಕ ಹೇಗೆ ಅಸಮಾನ ಅಧಿಕಾರಾಧರಿತ ಸ್ತ್ರೀಪುರುಷ ಸಂಬಂಧಗಳೇ ಕೊನೆಗೆ ಕುರುಕ್ಷೇತ್ರದಂತಹ ಯುದ್ಧಗಳನ್ನು ಅನಿವಾರ್ಯವಾಗಿಸುತ್ತವೆ ಎಂಬ ಮೌಲಿಕ ಚಿಂತನೆಯನ್ನು ಈ ಕಾದಂಬರಿ ಮಂಡಿಸುತ್ತದೆ. (ಬೆನ್ನುಡಿಯಲ್ಲಿ ಡಾ. ಸಿ. ಎನ್. ರಾಮಚಂದ್ರನ್)

ನಮ್ಮಲ್ಲಿ ಕೌಟುಂಬಿಕ ಇಲ್ಲವೆ ಸಾಮಾಜಿಕ ಅನಾಹುತಗಳಿಗೆ ಹೆಣ್ಣನ್ನು ಕಾರಣವಾಗಿಸುವುದು ಸಾಮಾನ್ಯವಾಗಿ ರೂಢಿ. ಇದು ಪುರುಷಹುನ್ನಾರದ ತಂತ್ರವೂ ಹೌದು. ಸೀತೆಯಿಂದ ರಾಮಾಯಣ ಯುದ್ಧ ನಡೆಯಿತು, ದ್ರೌಪದಿಯಿಂದ ಮಹಾಭಾರತ ಯುದ್ಧ ನಡೆಯಿತು - ಎಂದು ಹೇಳಿ ಹೆಣ್ಣನ್ನು ದೂರುವ ನಮ್ಮ ಸಮಾಜದ ಸ್ಥಾಪಿತ' ನಂಬಿಕೆಯನ್ನು ಪ್ರಶ್ನಿಸುತ್ತಾ, ಯುದ್ಧಗಳೆಲ್ಲ ಹೇಗೆ ಪುರುಷ ನಿರ್ಮಿತ ಮತ್ತು ಪುರುಷಾಹಂಕಾರವನ್ನು ತಣಿಸುವುದಕ್ಕಾಗಿಯೇ ನಡೆದಂತಹವು ಎಂಬುದನ್ನು ನಿರ್ವಹಿಸುತ್ತಲೇ, ಎಲ್ಲ ಯುದ್ಧಗಳ ನಂತರ ಸಿಕ್ಕುವ 'ಜಯ'ದ ಅರ್ಥವೇನು? ಎಂಬುದರ ವಿಶ್ಲೇಷಣೆಯೂ ಇಲ್ಲಿದೆ.

'ಜಯ' ಕಾದಂಬರಿಯಲ್ಲಿ 18 ಅಧ್ಯಾಯಗಳಿವೆ. ಈ ಕಾದಂಬರಿಯ ವಸ್ತುವಿನ ಅವಧಿ ಕೂಡ 18 ದಿನಕ್ಕೆ ಸೀಮಿತ. ಕೆಲವೊಮ್ಮೆ ಪಾತ್ರಗಳು ತಮ್ಮ ಹಿಂದಿನ ದಿನಗಳ ಸ್ಮರಣೆಯಲ್ಲಿ, ನೆನಪಿನಾಳದಲ್ಲಿ, ಕೆಲವೊಮ್ಮೆ ಹಿನ್ನೋಟದ ತಂತ್ರದಲ್ಲಿ ಮಹಾಭಾರತದ ಕಥಾನಕ ಬೆಳೆಯುತ್ತದೆ. ಪಾತ್ರಗಳು ರೂಪು ತಳೆಯುತ್ತವೆ. ಸಾಂಪ್ರದಾಯಿಕ ಸಮಾಜದ ಸ್ಥಾಪಿತ ಮೌಲ್ಯಗಳು ಪ್ರಶ್ನೆಗೆ ಒಳಗಾಗುತ್ತವೆ. ಒಟ್ಟು ಕಾದಂಬರಿಯ ದ್ರವ್ಯವನ್ನು ಎರಡು ಸ್ತರದಲ್ಲಿ ವಿಶ್ಲೇಷಿಸಬಹುದು : ವೇದಾ ಅವರ ಸೃಷ್ಟಿಯಲ್ಲಿ ರೂಪುಗೊಂಡ ಪಾತ್ರಗಳು ವ್ಯಕ್ತ ಪಡಿಸುವ ಹೊಸ ವಿಚಾರಗಳು ಹಾಗೂ ಈ ವಿಶಿಷ್ಟ ಸನ್ನಿವೇಶದಲ್ಲಿ ನಡೆಯುವ ತಾತ್ವಿಕ ಜಿಜ್ಞಾಸೆ.

ಮೂಲ ಮಹಾಭಾರತದಲ್ಲಿ ಹೇಡಿಯಾಗಿ, ಎಲ್ಲರ ಅಪಹಾಸ್ಯಕ್ಕೆ ಒಳಗಾಗಿ ಹಾಸ್ಯ ಪಾತ್ರವಾಗಿದ್ದ ಉತ್ತರ ಕುಮಾರ ಇಲ್ಲಿ ಶಾಂತಿ ಪ್ರಿಯನಾಗಿ, ಯುದ್ಧ ವಿರೋಧಿ, ಹೆಂಗರುಳಿನ, ಅನುಕಂಪಕ್ಕೆ ಗುರಿಯಾಗುವ ಪಾತ್ರವಾಗಿ ಉತ್ತರ ಚಿತ್ರಿತನಾಗಿದ್ದಾನೆ. ಪುರುಷನೊಳಗಿನ ಕೋಮಲತೆಯನ್ನು 'ಹೆಣ್ಣಿಗತನ'ವೆನ್ನುವ ನಮ್ಮ ಸಮಾಜದ ಪುರುಷ ರಾಜಕಾರಣದಲ್ಲಿ ಉತ್ತರ ಮೊದಲ ದಿನವೇ ಕೊಲ್ಲಲ್ಪಡುತ್ತಾನೆ. ಚಕ್ರವ್ಯೂಹದ ಪೂರ್ತಿ ವಿದ್ಯೆ ಗೊತ್ತಿಲ್ಲದಿದ್ದರೂ ತನ್ನ ಶೌರ್ಯವನ್ನು ಮೆರೆಯಬೇಕೆನ್ನುವ ಆಸೆಯಲ್ಲಿ ಅಭಿಮನ್ಯು ಮಹಾತ್ವಾಕಾಂಕ್ಷೆಗೆ ಬಲಿಯಾಗುತ್ತಾನೆ.

ಭಾನುಮತಿ, ಗಾಂಧಾರಿ, ದ್ರೌಪದಿ, ಸುಭದ್ರೆ, ಕುಂತಿ - ಎಲ್ಲ ಸ್ತ್ರೀಪಾತ್ರಗಳನ್ನು ಅತ್ಯಂತ ವಿವೇಚನೆಯಿಂದ ಅವರು ಹೇಗೆ ಸಂದರ್ಭದ ಕೂಸುಗಳಾಗಿ ಪರಿಣಮಿಸಿದರು ಎಂಬುದಾಗಿ ಅತ್ಯಂತ ವಿವೇಚನೆಯಿಂದ ಕುಸುರಿ ಕೆಲಸ ಮಾಡಿ ವೇದಾ ಚಿತ್ರಿಸಿದ್ದಾರೆ. ಹಾಗೆಯೇ ಪುರುಷ ಪಾತ್ರಗಳನ್ನು ಚಿತ್ರಿಸುವಾಗಲೂ ಕಪ್ಪು / ಬಿಳುಪಿನ ಪಾತ್ರಗಳಾಗಿಸದೆ ಹೇಗೆ ಪುರುಷರಾಜಕಾರಣವು ಒಳ್ಳೆಯ ವ್ಯಕ್ತಿಗಳನ್ನು ಭ್ರಷ್ಟಗೊಳಿಸುತ್ತದೆ, ಎಂದು ವಿಶಿಷ್ಟ ದೃಷ್ಟಿಕೋನದಿಂದ ನೆಯ್ದಿದ್ದಾರೆ.

ಈ ಕಾದಂಬರಿಯಲ್ಲಿ ವೇದಾರವರ ಇತರ ಬರವಣಿಗೆಗಳಲ್ಲಿ ಕಾಣದಂತಹ ತಾತ್ವಿಕ ಜಿಜ್ಞಾಸೆ ಮೂಡಿ ಬಂದಿದೆ. ದ್ರೌಪದಿಯ ವಸ್ತ್ರಾಪಹರಣದ ಪ್ರಸಂಗವನ್ನು ನೆನಪಿಸಿಕೊಳ್ಳುತ್ತಾ ಭಾನುಮತಿ ಯೋಚಿಸುತ್ತಾಳೆ : ಪಂಚ ಪಾಂಡವರ ಪಟ್ಟಮಹಿಷಿಯಾಗಿಯೂ ತುಂಬಿದ ಸಭೆಯಲ್ಲಿ ದ್ರೌಪದಿಗಂದು ಒದಗಿದ ಅವಾಚ್ಯ, ಅನೂಹ್ಯ ಪರಿಸ್ಥಿತಿಯಿಂದಾಗಿ ಗಂಡ ಮತ್ತು ಭಾವ ಮೈದುನರ ಕಡೆಗೆ ರೋಷ ಉಕ್ಕುತ್ತಿದ್ದರೆ, ಆ ಕ್ಷಣ ಅವಳಿಗೆ ಧರ್ಮರಾಯನ ಕರ್ಮತ್ವ, ಭೀಮಾರ್ಜುನರ ಶೌರ್ಯ ಪ್ರತಾಪ, ನಕುಲ ಸಹದೇವರುಗಳ ವಿಧೇಯತೆ, ವಿವೇಕಗಳು ಅರ್ಥಹೀನವೆನಿಸಿತ್ತು, ಹೆಣ್ಣಿಗೆ ಸಂಬಂಧಪಟ್ಟ ಪ್ರಶ್ನೆಯ ಸಂದರ್ಭದಲ್ಲಿ ಪಾಂಡವ-ಕೌರವರಿಬ್ಬರ ಧರ್ಮವೂ ಒಂದೇ ಆಗಿಬಿಟ್ಟಿತ್ತಲ್ಲ ಎಂದು ಹಲಬುತ್ತಾಳೆ. ಭಾನುಮತಿಯ ಪಾತ್ರದ ಮೂಲಕ ಧರ್ಮ / ಅಧರ್ಮದ ಜಿಜ್ಞಾಸೆ ನಡೆಯುತ್ತದೆ.

ದುರ್ಯೋಧನ ಕರ್ಮದ ಹಾದಿ ಹಿಡಿದು ಕುರುಕ್ಷೇತ್ರದ ಗುರಿ ಮುಟ್ಟಿದ್ದರೆ ಧರ್ಮರಾಯ ಧರ್ಮದ ಹಾದಿ ಹಿಡಿದು ತನ್ನೊಂದಿಗಿನ ಜನರ ಸಹಿತ ಕುರುಕ್ಷೇತ್ರವನ್ನು ಬಂದು ಮುಟ್ಟಿದ್ದಾನೆ. ದುರ್ಯೋಧನನದು ಕರ್ಮದ ಅತಿರೇಕವಾದರೆ, ಧರ್ಮರಾಯನದು ಧರ್ಮದ ಅತಿರೇಕ. ಕರ್ಮವಾಗಲಿ, ಧರ್ಮವಾಗಲಿ ಅತಿರೇಕಕ್ಕೆ ಹೋದಾಗ ತಮ್ಮ ತಮ್ಮ ಗುಣಾತ್ಮಕ ಅಂಶವನ್ನು ಕಳೆದುಕೊಳ್ಳಲೇಬೇಕಾಗುತ್ತಾದೆ- ಇದು ಕಾದಂಬರಿಯು ವಿಸ್ತರಿಸುವ ಮುಖ್ಯ ಅಂಶವೂ ಹೌದು. ಜೂಜು ಎಂದರೆ ಮಾಯೆ, ಮೋಸ, ಅಧರ್ಮ, ಪಾಪ-ಇತ್ಯಾದಿಗಳೆಲ್ಲ

(9ನೇ ಪುಟಕ್ಕೆ)

ಸಾಹಿತ್ಯ-ಸ್ತ್ರೀಯರ ಸ್ವಭಾವಸಿದ್ಧ ಕ್ಷೇತ್ರ*

- ಶ್ಯಾಮಲಾ ದೇವಿ ಬೆಳಗಾಂಕರ್

ಬರವಣಿಗೆಯ ಕಲೆಯ ಬಗ್ಗೆ ಮಾತನಾಡುವದು ಕಷ್ಟ ಆದರೆ ಬರೆದುಬಿಡುವದು ಮಾತ್ರ ಸುಲಭ. ಗಂಡಸರಿಗಿಂತ ಹೆಣ್ಣುಮಕ್ಕಳಿಗೆ ಅದು ಹೆಚ್ಚು ಸುಲಭ. ಬರವಣಿಗೆಯ ಬಗ್ಗೆ ಮಾತನಾಡುವ ಕೆಲಸವನ್ನು ಗಂಡಸರಿಗೆ ಬಿಟ್ಟುಕೊಡೋಣ ಬರವಣಿಗೆಯ ಕಸಬನ್ನು ನಾವು ಕೈವಶಪಡಿಸಿಕೊಳ್ಳೋಣ ಶಾಸ್ತ್ರ ಅವರಿಗಿರಲಿ, ಕಲೆ ನಮಗಿರಲಿ. ಕಲೆ-ಅದು ಸಾಹಿತ್ಯ ಕಲೆ, ಸಂಗೀತ ಕಲೆ, ಚಿತ್ರಕಲೆ ಯಾವುದೇ ಇರಲಿ-ಹೆಂಗಸರಿಗೆ ಅಂಗೈ ನೆಲ್ಲೀಕಾಯಿ. ದೇವರು ಆ ವರ ನಮಗೆ ಕೊಟ್ಟು ಬಿಟ್ಟಿದ್ದಾನೆ. ಒರಟು ತತ್ವ ವಿಚಾರಗಳನ್ನು ಗಂಡಸರು ಹೇಳುತ್ತ ಕೂಡಲಿ; ನಾವು ನಮ್ಮ ಮಧುರ ವಿನಯದಿಂದ ಮುಗುಳುನಗೆಯಿಂದ, ಹಿತಮಿತ ವಚನಗಳಿಂದ, ಅನುಭವದ ಮಾತುಗಳಿಂದ ಮನಗಾಣಿಸಿ ಬಿಡೋಣ. ಗಂಡಸರಿಗೆ ತರ್ಕ ಶಾಸ್ತ್ರ-ವೇದಾಂತಗಳಿರಲಿ, ನಮಗೆ ಮೂರು ಸಾಲಿನ ಲಾಲಿ ಸಾಕು. ಮೂರು ಸಾಲುಗಳಲ್ಲಿ ವಾಮನಾವತಾರದ ಮೂರು ಹೆಜ್ಜೆಗಳನ್ನು ಅಳೆಯಬಲ್ಲೆವು ನಾವು.

ಹೂವಿನ್ಯಾಗ ಹುದುಗ್ಯಾನ, ಮಾಲ್ಯಾಗ ಮಲಗ್ಯಾ।
ಮೊಗ್ಗ್ಯಾಗ ಕಣ್ಣು ತೆರದಾನ। ಲಿಂಗಯನ
ನೋಡಟಗೆ ನಿದ್ದಿ ಬಯಲಾಗಿ॥

ಎಂಬೀ ಮೂರು ಸಾಲುಗಳಲ್ಲಿ ಮೂರು ಲೋಕದ ಸೌಂದರ್ಯ ತೋರಿಸಿದ ಹೆಣ್ಣು ಹೃದಯ ಸಾಮಾನ್ಯವೇ? ನೂರು ನೀತಿ ಪಾಠಗಳು ಮಾಡಲಾರದ ಕೆಲಸವನ್ನು, 'ಕ್ಷಮೆಯ ಸೆರಗ ಹೊಚ್ಚಿ ಕರೆದುಕೊಳ್ಳುವ' ತಾಯಿಯ ಒಂದು ನುಡಿ ಮಾಡಬಲ್ಲದು. ಸ್ತ್ರೀಯರ ಕಣ್ಣಸ್ನೆಯು ಪುರುಷರ ಸಾಹಸಕ್ಕೆ ಸ್ಫೂರ್ತಿಯಾಗಬಹುದಾಗಿದೆ; ಒಂದೊಂದು ಸಲ ಅವರ ಸ್ವೈರಾಚಾರಕ್ಕೆ ಅಂಕುಶವಾಗಬಹುದಾಗಿದೆ. ಮನವೊಲಿಸುವ ಈ ವಿಲಕ್ಷಣಶಕ್ತಿಯೇ ಸಾಹಿತ್ಯದ ಮೂಲಸೆಲೆಯಾಗಿದೆ. 'ಕಾಂತಾಸಮ್ಮಿತ' ಎಂಬುದಾಗಿ ಸಾಹಿತ್ಯದ ಲಕ್ಷಣ ಹೇಳಿದ್ದಾರೆ. ಸ್ತ್ರೀಯರು ಸ್ವಭಾವಸಹಜವಾಗಿ ಮನವೊಲಿಸುವಂತೆ ಸಾಹಿತ್ಯವೂ ಮನವೊಲಿಸಬೇಕೆಂತೆ. ಎಂದ ಮೇಲೆ ಮನವೊಲಿಸುವ ಗುಣ ಪಡೆದುಬಂದ ಲಲನೆಯರೆ ಸಾಹಿತ್ಯವನ್ನು ಸರಿಯಾಗಿ ಸೃಷ್ಟಿಸಬಲ್ಲರು ಎಂದು ಹೇಳಿದರೆ ತಪ್ಪಾಗುವದೆ? ಜಗತ್ತಿಗೆ ತಿಳಿಹೇಳುವ ಸಾಹಿತ್ಯಕ್ಕಿಂತ ಮನವೊಲಿಸುವ ಸಾಹಿತ್ಯವೇ ಬೇಕಾಗಿದೆಯೆಂದು ನನ್ನ ಭಾವನೆ. ನಮ್ಮ ಸುತ್ತು ಮುತ್ತೂ ನಡೆದ ಭಯಂಕರ ಮಾನವಹತ್ಯೆಯನ್ನು ನೋಡೋಣ. ಆಗ ಈ ಮಾತು ಮನದಟ್ಟಾಗುವದು. ಸ್ತ್ರೀಯ ಆರಾಧನ ಶಕ್ತಿಗೆ ಸ್ವಲ್ಪ ಅವಕಾಶ ಸಿಕ್ಕಿದರೆ, ಮನುಷ್ಯನ ಇತಿಹಾಸದಲ್ಲಿ ಯುದ್ಧವೆನ್ನುವದು ಹಳೆ ಮಾತಾಗುತ್ತಿತ್ತು, ಅದರ ಬದಲು ತನ್ನದನ್ನೇ ಸಾಧಿಸಬೇಕೆನ್ನುವ ಹಟ, ಬಲಪ್ರಯೋಗದಿಂದಲಾದರೂ ಎರಡನೆಯವರ ಮೇಲೆ ತನ್ನ ವರ್ಚಸ್ವ ಹೇರುವ ಚಟ ಇವುಗಳಿಂದ ನಂದನವನವಾಗಬಹುದಾದ ಭೂತಲವು ಪ್ರಳಯತಾಂಡವಕ್ಷೇತ್ರವಾಗಿದೆ. ಇದು ತಪ್ಪಬೇಕಾದರೆ ಸ್ತ್ರೀಯರಿಗೆ ಪ್ರಪಂಚದ ಆಗು-ಹೋಗುಗಳಲ್ಲಿ, ರಾಷ್ಟ್ರರಾಷ್ಟ್ರಗಳ ಕಾರಭಾರದಲ್ಲಿ ತಕ್ಕ ಸ್ಥಾನ ದೊರೆಯಬೇಕು. ಅವಳ ವಾಸ್ತವ ವ್ಯವಹಾರಕುಶಲ ಸ್ವಭಾವಕ್ಕೆ ಎಡೆ ದೊರೆಯಬೇಕು. ಎಲ್ಲವನ್ನು ಸರಿಪಡಿಸುವ ಅವಳ ಕೈಚಳಕಕ್ಕೆ ಆಸ್ಪದ ಸಿಗಬೇಕು. ಅವಳ ಅಂತಃಕರಣಶಕ್ತಿಗೆ ಸ್ವಲ್ಪ ಅನುವು ಸಿಕ್ಕರೆ ಸಾಕು ಅವಳು ಸಾಮ್ರಾಜ್ಯವಾದಿಗಳನ್ನೂ ನಾಝಿವಾದಿಗಳನ್ನೂ ಕೂಡಿಸಬಲ್ಲಳು ; ಶ್ರೇಷ್ಠ-ಕನಿಷ್ಠ ಬಿಳಿ-ಕರಿ ಮೊದಲಾದ ಭೇದಗಳನ್ನು ಹೋಗಲಾಡಿಸಬಲ್ಲಳು. ಹಲವು ಕಾರ್ಯಗಳನ್ನು ಸ್ತ್ರೀಯು ಸ್ವಭಾವಸಹಜವಾಗಿ ಕೈಗೂಡಿಸಬಲ್ಲಳು. ಕೈಗಾರಿಕೆ, ಚಿತ್ರಕಲೆ, ಸಂಗೀತ ಇವುಗಳಂತೂ ಅವಳ ಸ್ವಂತದ ಸೊತ್ತು. ವರ್ಷಗಟ್ಟಲೆ ಪುರುಷರು ಸಂಗೀತ ಕಲೆಯಲ್ಲಿ ಪರಿಶ್ರಮಪಡಲಿ, ಸ್ತ್ರೀಯು ತನ್ನ ನಿಸರ್ಗದತ್ತ ಶಕ್ತಿಯಿಂದ ಒಂದು ತಿಂಗಳಲ್ಲಿ ಅವರನ್ನು ಮೀರಿಸಬಲ್ಲಳು. ರೇಡಿಯೋ ಕಾರ್ಯಕ್ರಮಗಳಲ್ಲಿ ಹೆಂಗಸರ ಸಂಗೀತ ಕಾರ್ಯಕ್ರಮಗಳೇ ಇಷ್ಟು ಕಳೆತುಂಬುವದೇಕೆ? 'ಕಲಾಕ್ಷೇತ್ರ- ಅದು ಸಾಹಿತ್ಯ-ಚಿತ್ರ-ಸಂಗೀತ-ಕೈಗಾರಿಕೆ ಯಾವುದಕ್ಕೇ ಸಂಬಂಧಿಸಿರಲಿ - ಸ್ತ್ರೀಯರಿಗೆ ಸ್ವಯಂಸಿದ್ಧವಾದದ್ದು. ಅದರಲ್ಲಿ ಮೊದಲು ಸ್ತ್ರೀಯರು ಕಾಲಿಡಲಿ ; ಆಮೇಲೆ ಪುರುಷರು ಬರಲಿ.'

ಸಾಹಿತ್ಯಕಲೆ ಸ್ತ್ರೀಯರಿಗೆ ಸ್ವಭಾವಸಿದ್ಧವಾದದ್ದು ; ಅವರು ಅದನ್ನು ಬೇಗನೆ ಕೈವಶ ಮಾಡಿಕೊಳ್ಳಬಲ್ಲರು ; ಅವರ ಮನೋಧರ್ಮಕ್ಕೆ ಅಲ್ಲಿ ಸ್ವಾಭಾವಿಕ ಅವಕಾಶವಿದೆ; ಆದ್ದರಿಂದ ಈ ಕ್ಷೇತ್ರದಲ್ಲಿ ಅವರು ಒಡನೆ ಅಡಿಯಿಡಲಿ ಎಂದು ಈವರೆಗೆ ಹೇಳಿದ್ದೇನೆ. ಇನ್ನೂ ಒಂದು ಕಾರಣಕ್ಕಾಗಿ ಸ್ತ್ರೀಯರೇ ಕೆಲವೊಂದು ಬಗೆಯ ಸಾಹಿತ್ಯ ನಿರ್ಮಾಣವನ್ನು ಕೈಕೊಂಡರೆ ಒಳಿತಾಗುವದೆಂದು ನಾನು ಭಾವಿಸಿದ್ದೇನೆ. ಈಗ ಕನ್ನಡ ಪತ್ರಿಕೆಗಳು ಹೇರಳವಾಗಿ

ಹೊರಡುತ್ತಿವೆ. ಕನ್ನಡ ಪತ್ರಿಕೆಗಳು ಕಡಿಮೆ ಎನ್ನುವ ಕಾಲ ಹೋಯಿತು. ದಿನಪತ್ರಿಕೆ-ವಾರಪತ್ರಿಕೆ-ಮಾಸಪತ್ರಿಕೆ ಬೇಕಾದಷ್ಟು ಬರುತ್ತಿವೆ. ಅವುಗಳಲ್ಲಿ ಕತೆ-ಹರಟೆ-ನಾಟಕ ಮೊದಲಾದ ರಂಜಕ ಸಾಹಿತ್ಯಕ್ಕೆ ಸಾಕಷ್ಟು ಸ್ಥಲ ಬಿಟ್ಟಿರುತ್ತಾರೆ. ಆದರಲ್ಲಿಯೂ ಸ್ತ್ರಿಯರ ಜೀವನಕ್ಕೊ, ಸಮಸ್ಯೆಗಳಿಗೋ, ಪ್ರಣಯ ವ್ಯವಹಾರಗಳಿಗೋ ಸಂಬಂಧಿಸಿದವೆಂದು ಹೇಳಿಕೊಳ್ಳುವ ಕತೆ-ಹರಟೆಗಳೇ ಹೆಚ್ಚಾಗಿರುತ್ತವೆ. ಪ್ರಿಯಕರ-ಪ್ರೇಯಸಿಯರ ಪ್ರೇಮ, ಅನಿವಾರ್ಯವಾಗಿ ತಪ್ಪು ಹಾದಿ ಹಿಡಿದ ಹೆಣ್ಣು ಮಗಳ ಗೋಳು, ಸ್ತ್ರೀಯರ ಮೇಲೆ ಸಮಾಜದ ಅನ್ಯಾಯ, ಇವೇ ಮೊದಲಾದವು ಸರ್ವ ಸಾಮಾನ್ಯವಾಗಿ ಅವುಗಳ ವಿಷಯಗಳು. ರಾಶಿರಾಶಿಯಾಗಿ ಹುಟ್ಟುತ್ತಿರುವ ಈ ಸಾಹಿತ್ಯವನ್ನು ನೋಡಿದಂತೆಲ್ಲಾ, "ದಯಮಾಡಿ ನಿಲ್ಲಿಸಿ ಬಿಡಿರಿ; ಹೆಣ್ಣಿಗೆ ಉಪಕಾರ ಮಾಡಲು ಹೊರಟ ದಯಾವೀರರುತಾವು ದಯವಿಟ್ಟು ತಮ್ಮ ಲೆಕ್ಕಣಿಕೆಯನ್ನು ಅಲ್ಲಿಗೇ ತಡೆಯಿರಿ; ನಮ್ಮ ಮನೋಧರ್ಮದ ಜ್ಞಾನ ನಿಮಗೆ ಎಳ್ಳಷ್ಟೂ ಇರುವಂತೆ ತೋರುವುದಿಲ್ಲ ; ನಮ್ಮ ಸ್ವಭಾವವನ್ನು ವಿಂಗಡಿಸಿ ಹೇಳುವ ಕೆಲಸವನ್ನು ಅರಿಯದವರಾದ ನೀವು ದಯವಿಟ್ಟು ಮಾಡಬೇಡಿರಿ" ಎಂದು ನಮ್ಮ ಪುರುಷ ಬಾಂಧವರಿಗೆ ಬಿನ್ನವಿಸಬೇಕೆಂದೆನಿಸುತ್ತದೆ. ಸ್ತ್ರೀಪಕ್ಷಪಾತ ತೋರಿಸಹೋಗಿ ಸ್ತ್ರೀಯರ ವಿಡಂಬನೆಯನ್ನೇ ಮಾಡುವ ದೃಶ್ಯವು ಹಲವು ಸಲ ಕಂಡುಬರುತ್ತದೆ. ವೇಶ್ಯಾಜೀವನ, ದಲಿತ ಸ್ತ್ರೀಯ ಜೀವನ, ಆಸ್ತಿಯ ಹಕ್ಕಿಗೆ-ಪುನರ್ವಿವಾಹ, ಹಕ್ಕಿಗೆ ಎರವಾದ ಹೆಣ್ಣಿನ ಬಾಳು ಇವುಗಳನ್ನು ಪುರುಷರು ಸರಿಯಾಗಿ ತಿಳಿಯುವದೇ ಕಷ್ಟ. ಆ ದುಃಖವನ್ನು - ಅವರೆಷ್ಟು ಸಹಾನುಭೂತಿಶಾಲಿಗಳಾಗಿರಲಿ- ಅವರು ಸಮರ್ಪಕವಾಗಿ ಬಿಚ್ಚಿಡಲಾರರು. ಆದುದರಿಂದ ಹೆಣ್ಣು ಮಕ್ಕಳೇ ಲೆಕ್ಕಣಿಕೆಯೆತ್ತಿ ಈ ಸ್ತ್ರೀಸ್ವಭಾವ ವಿಡಂಬನೆಯನ್ನು ನಿಲ್ಲಿಸಲಿ. ತಮ್ಮ ಸಹಜ ಶಕ್ತಿಯಿಂದ ಸಾಹಿತ್ಯದಲ್ಲಿ ತಮ್ಮ ಸ್ಥಾನವನ್ನು ಕಂಡುಕೊಳ್ಳಲಿ. ಅನ್ಯಾಯದ ಪ್ರತೀಕಾರಬುದ್ಧಿಯು ಸ್ತ್ರೀಗೆ ಸಹಜವಾದುದಲ್ಲ, ಆದರೆ ಅವಳಿಗೆ ಸರಿಯಾದ ಅವಕಾಶ ದೊರೆತರೆ ತನಗಾಗುವ ಅನ್ಯಾಯವನ್ನು ಅವಳು ಹೋಗಲಾಡಿಸುವಳಲ್ಲದೆ, ವಿಶ್ವಮಾನವರಿಗಾಗುತ್ತಲಿರುವ ನೋವನ್ನೂ ಗಾಯವನ್ನೂ ಅವಳು ಮಾಯಿಸಬಲ್ಲಳು. ಆದುದರಿಂದ ಅಕ್ಕತಂಗಿಯರೇ, ಎದ್ದೇಳಿರಿ; ಮತ್ತು ಸಾಹಿತ್ಯದಲ್ಲಿ ನಿಮ್ಮ ಗೌರವದ ಸ್ಥಾನವನ್ನು ಬೇಗನೆ ಕಂಡುಕೊಳ್ಳಿರಿ! ▢▢

---

*ಬೆಳಗಾವಿ ಜಿಲ್ಲೆಯ ನಾಲ್ಕನೆಯ ಸಾಹಿತ್ಯ ಸಮ್ಮೇಳನದಲ್ಲಿ ಮಹಿಳಾಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ಶ್ಯಾಮಲಾದೇವಿಯವರ ಭಾಷಣದಿಂದ.

(7ನೇ ಪುಟದಿಂದ)

ಹೇಳ ಹೇಳುತ್ತಲೇ ಧರ್ಮರಾಯ 'ಆಟಕ್ಕೆ ಕರೆದಾಗ ಹಿಂಜರಿಯುವುದಿಲ್ಲ' ಎಂಬ ವ್ರತ ಉಳಿಸಿಕೊಳ್ಳಲಿಕ್ಕಾಗಿಯೇ ಆಟವಾಡಲು ಕುಳಿತು ತನ್ನ ಹೆಂಡತಿಯನ್ನು ಅಡವಿಡುವವರೆಗೂ ಆಟ ನಿಲ್ಲಿಸದ ಧರ್ಮರಾಯನ ಧರ್ಮವೆಂತದು.

ಈ ಮಹಾಭಾರತ ಯುದ್ಧಕ್ಕೆ ತಾನೇ ಕಾರಣನಾದೆನೋ ಎಂಬ ಅಪರಾಧಿ ಪ್ರಜ್ಞೆ ದ್ರೌಪದಿಯನ್ನು ಕಾಡುತ್ತಿರುತ್ತದೆ. ಕಾದಂಬರಿಯ ಹಲವಾರು ಸ್ತ್ರೀ ಪಾತ್ರಗಳೂ ಹಾಗೆಯೇ ನಂಬಿವೆ. ಆದರೆ ದ್ರೌಪದಿಯನ್ನು ಸಂತೈಸುತ್ತಾ ಸುಭದ್ರೆ ಹೇಳುವ ಮಾತುಗಳು ಇಡೀ ಕಾದಂಬರಿಯ ಪ್ರಬಂಧ ಧ್ವನಿಯಾಗಿವೆ. "ಭೂಮಿಯ ಅಳಿವು ಉಳಿವಿನ ಪ್ರಶ್ನೆಯಲ್ಲಿ ಪುರುಷ ರಾಜಕಾರಣದ ಹಸ್ತಕ್ಷೇಪ ಇದೆಯೇ ವಿನಾ ನನ್ನ ನಿನ್ನ ಬೇಕು ಬೇಡಗಳ ಅಂಶ ಲವಲೇಶವೂ ಇಲ್ಲ. ನಾನು ನೀನೂ ಬರೆ ಸಾಧನಗಳೂ ಅಷ್ಟೇ."

ವೇದಾರವರು ತಮ್ಮ ಈ ಕಾದಂಬರಿಗೆ ಇಟ್ಟಿರುವ ಹೆಸರು 'ಜಯ' ಔಚಿತ್ಯಪೂರ್ಣವಾಗಿದೆ. ಯಾವ ಪವಾಡಗಳು ಮತ್ತು ಅಲೌಕಿಕ ವ್ಯಕ್ತಿ ಘಟನೆಗಳನ್ನು ಒಳಗೊಳ್ಳದ ಮಹಾಭಾರತದ ಮೂಲ ಪಠ್ಯವಾದ 'ಜಯ' ಶೀರ್ಷಿಕೆಯನ್ನು ಈ ಕಾದಂಬರಿ ಧ್ವನಿಸುತ್ತದೆ, ಎನ್ನಬಹುದಾದರೂ ಕಾದಂಬರಿಯು ಮುಖ್ಯವಾಗಿ ಯಾರ ಜಯವನ್ನು ಕುರಿತು ಹೇಳುತ್ತಿದೆ? ಎಂಬ ವ್ಯಂಗ್ಯವು ಇಲ್ಲಿ ಸುಳಿದಾಡುತ್ತಿದೆ. ಹದಿನೆಂಟು ದಿನಗಳ ಈ ಮಹಾಯುದ್ಧದಲ್ಲಿ ತಮ್ಮ ಆಪ್ತರನ್ನು, ಹಿರಿಯರನ್ನು , ಕಿರಿಯರನ್ನೆಲ್ಲಾ ಕಳೆದುಕೊಂಡ ಮೇಲೆ ತಮ್ಮದು ಎಂತಹ ಜಯ ಎಂದು ಪಾಂಡವರು ಪ್ರಶ್ನಿಸಿಕೊಳ್ಳುವಂತೆ ಕಾದಂಬರಿ ಧ್ವನಿಸುತ್ತದೆ. 'ಸಕಲ ಸೂಕ್ತ ವಿಧಿ ವಿಧಾನಗಳೊಂದಿಗೆ ವೇದೋಕ್ತವಾಗಿ ಧರ್ಮರಾಯ ಸಿಂಹಾಸನ ಏರಿದ್ದ, ಇಡೀ ಸಿಂಹಾಸನವನ್ನು ತುಂಬ ಬಲ್ಲವಳೂ, ಅದನ್ನು ಶೋಭಾಯಮಾನಗೊಳಿಸಬಲ್ಲವಳೂ ಆಗಿದ್ದ ಪಾಂಡವರ ಪಟ್ಟ ಮಹಿಷಿ ದ್ರೌಪದಿ ಅಲ್ಲಿರಲಿಲ್ಲ' ದ್ರೌಪದಿ ಧರ್ಮರಾಯನೊಂದಿಗೆ ಪಟ್ಟಾಭಿಷಕ್ತಳಾಗಲು ನಿರಾಕರಿಸಿದ್ದರಿಂದ ಧರ್ಮರಾಯ ಒಂಟಿಯಾಗಿಯೇ ಸಿಂಹಾಸನವೇರಿದ್ದ. ಅದರಿಂದ ಅವನು ಸಂಭ್ರಮ ಪಟ್ಟನೇ ? ಹಾಗಾದರೆ ಜಯ ಯಾರದು ? - ಈ ಜಿಜ್ಞಾಸೆಯನ್ನು ಕಾದಂಬರಿ ಧ್ವನಿಪೂರ್ಣವಾಗಿ ಚರ್ಚಿಸುತ್ತದೆ.

ಕಾದಂಬರಿಗೆ ಕವಿಯಿತ್ರಿ ಸ. ಉಷಾರವರ ಮುನ್ನುಡಿ ಮತ್ತು ಪ್ರಸಿದ್ಧ ವಿಮರ್ಶಕ ಡಾ|| ಸಿ.ಎನ್. ರಾಮಚಂದ್ರನ್‌ರವರ ಬೆನ್ನುಡಿಯೂ ಶೋಭೆ ತಂದಿದೆ. ▢▢

- ಅಚಲ

ಡೆಂಗಿ ಜ್ವರ ತಡೆಗಟ್ಟುವ ಬಗ್ಗೆ ಮುಂಜಾಗ್ರತೆ ಕ್ರಮಗಳು

ಡೆಂಗಿ ಜ್ವರ ಎಂದರೇನು?

ಡೆಂಗಿ ಜ್ವರವು ಡೆಂಗಿ ವೈರಸ್‌ನಿಂದ ಉಂಟಾಗುವ ಖಾಯಿಲೆ. ಈ ಖಾಯಿಲೆಯು ಸೋಂಕು ಹೊಂದಿದ ಈಡಿಸ್ ಈಜಿಪ್ಟೈ ಎಂಬ ಸೊಳ್ಳೆಯ ಕಚ್ಚುವಿಕೆಯಿಂದ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ.

ಈ ರೋಗದ ಮುಖ್ಯ ಲಕ್ಷಣಗಳು :

ಇದ್ದಕ್ಕಿದ್ದಂತೆ ತೀವ್ರಜ್ವರ, ವಿಪರೀತ ತಲೆನೋವು, ಕಣ್ಣುಗಳ ಹಿಂಬಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು ಕಾಣಿಸಿಕೊಳ್ಳುವುದು ಈ ರೋಗದ ಲಕ್ಷಣ. ಹಲವು ಬಾರಿ ಮೂಗು, ಬಾಯಿ ಮತ್ತು ವಸಡುಗಳಲ್ಲಿ ರಕ್ತಸ್ರಾವದ ಚಿಹ್ನೆಗಳು ಕಂಡುಬರುತ್ತವೆ. ಈ ಲಕ್ಷಣಗಳು ಕಂಡುಬಂದಲ್ಲಿ ತಕ್ಷಣ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ, ರಕ್ತಪರೀಕ್ಷೆ ಮಾಡಿಸಿ, ಸೂಕ್ತ ಚಿಕಿತ್ಸೆ ಪಡೆಯುವುದು.

ಸಾರ್ವಜನಿಕರು ಡೆಂಗಿ ರೋಗವನ್ನು ತಡೆಗಟ್ಟಲು ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು :

- ಡೆಂಗಿ ಹರಡುವ ಈಜಿಪ್ಟೈ ಸೊಳ್ಳೆಗಳು ಮನೆಯಲ್ಲಿನ ನೀರು ಶೇಖರಿಸುವ ಸಿಮೆಂಟ್ ತೊಟ್ಟಿಗಳು, ಬ್ಯಾರೆಲ್‌ಗಳು, ಡ್ರಮ್‌ಗಳು, ಏರ್‌ಕೂಲರ್, ಹೂಕೊಂಡದ ನೀರಿನ ಸಂಗ್ರಹಗಳು ಇತ್ಯಾದಿಗಳಲ್ಲಿ ಉತ್ಪತ್ತಿಯಾಗುವುದರಿಂದ ಇವುಗಳನ್ನು ವಾರಕ್ಕೊಮ್ಮೆ ಸಂಪೂರ್ಣವಾಗಿ ಶುಚಿಗೊಳಿಸಿ, ಯಾವಾಗಲೂ ಭದ್ರವಾದ ಮುಚ್ಚಳಿಕೆಯಿಂದ ಮುಚ್ಚಿ ಸೊಳ್ಳೆ ಉತ್ಪತ್ತಿಯಾಗದಂತೆ ಎಚ್ಚರವಹಿಸಿ.

- ಬಯಲಲ್ಲಿ ಟೈರು, ಎಳನೀರಿನ ಚಿಪ್ಪು ಮತ್ತು ತ್ಯಾಜ್ಯ ವಸ್ತುಗಳಲ್ಲಿ ನೀರು ಸಂಗ್ರಹವಾಗದಂತೆ ಸೂಕ್ತ ವಿಲೇವಾರಿ ಮಾಡುವುದು ಅಥವಾ ನಾಶಗೊಳಿಸುವುದು.

- ಈ ರೋಗ ಹರಡುವ ಸೊಳ್ಳೆಗಳು ಹಗಲಲ್ಲಿ ಕಚ್ಚುವುದರಿಂದ ಸೊಳ್ಳೆ ಕಡಿತದಿಂದ ಪಾರಾಗಲು ಮಕ್ಕಳು, ವಿಶ್ರಾಂತಿ ಪಡೆಯುವ ವಯೋವೃದ್ದರು, ಖಾಯಿಲೆಯಿಂದ ನರಳುವವರು ತಪ್ಪದೇ ಸೊಳ್ಳೆಪರದೆಯನ್ನು ಉಪಯೋಗಿಸುವುದು ಹಾಗೂ ಇತರೆ ಸೊಳ್ಳೆ ನಿರೋಧಕಗಳನ್ನು ಬಳಸುವುದರಿಂದ ಈ ರೋಗವನ್ನು ತಡೆಗಟ್ಟಲು ಸುಲಭ ಹಾಗೂ ಸರಳ ವಿಧಾನ.

ನಿಮ್ಮ ಮನೆಯ ಒಳಗೆ ಹಾಗೂ ಮನೆಯ ಸುತ್ತಮುತ್ತ ಸೊಳ್ಳೆ ಉತ್ಪತ್ತಿಯನ್ನು ತಡೆಗಟ್ಟಿ ಡೆಂಗಿ ಜ್ವರ ನಿಯಂತ್ರಿಸಿ

ಕರ್ನಾಟಕ ವಾರ್ತೆ.

ಕಂತಿಯ ದೇಶಾಂತರ

- ಶ್ಯಾಮಲಾ ದೇವಿ ಬೆಳಗಾಂಕರ್

"ಹಯ್ಯೋ ಶಿವನೇ, ಏನ್ ನನ್ನ ಬಾಳಿವೀ ಮಾಡಿದಿ! ಮನ್ಯಾಗ ಅರಿಗಿಣೇ ಅಂತಾ ಎರಡು ಮಕ್ಕಳನ್ನು ಇಟಗೊಂಡು ದುಡಿದು ತೀಂದೇನಂದ್ರೂ ಜೀವಕ ಸುಖಾ ಇಲ್ಲಾ. ಮದಿವ್ಯಾಗಿ ಇವನ ಕೈಯ್ಯಾಗ ಉರಿಲಾಕ ಹತ್ತಿ ಆರ ವರ್ಷಾತೂ-ಮದಮದಲ ಅಟ ದುಡೀತಿದ್ದಾ - ಈಗ ಐದ ವರ್ಷದಿಂದೂ ಆಚೀ ಕಡ್ಡೀನ ಇಚೀಗೆ ಹಾಕಾಂಣಿಲ್ಲಾ, ಸುಮಾಗ ಕುಂತ ತಿನ್ನಂದ್ರ ಅದೂ ಬ್ಯಾಡಾ..... ನಾ ದುಡದ ತಂದದ್ದನ್ನ ಎಲ್ಲಾ ಕಸಗೊಂಡ ಕ್ಯಾರಾ, ಹೆಂಡಾ ಕುಡದು ಜೋಲಿ ಹೊಡಕೊಂತ ಬರ್ತಾನ, ಮತ್ತ ಮನ್ಯಾಗ ರೊಟ್ಟಿಲ್ಲಾಂತ ನನ್ನಟ ತಳಸ್ತಾನ, ಹೀಂಗಾಗಿ ಯಾಪಾರಗಾರ್ರ ಲೆಕ್ಕಾಚಾರ ಕೊಡೂದೂನು ನಿಂತ ಹೋಗಾಕತ್ತೂ-ಉಪಾಸಾ ವನವಾಸಾನೂ ಆತೂ - ಅಂತ್ಹೇಳಿ ನಾ ಅಟ ಇಗ್ಗೀ ಮಾಡೀ, ಸಾವಕಾರಗ ಮದಲ ಆಟ ನದೀ ಮ್ಯಾಗ ಆಳ ಕಳಸಪಾ ಅಂತ ಸೂಚ ಕೊಟ್ಟವೋಗಿದ್ದೇ - ಇಂದ ಅಟ ಯಾಪಾರಾನೂ ಉಣ್ಣವೆಂತ ಚಲೋ ಆತೂ ಅಂತ, ಇಟ ಸಾಲಾನಾರ ಸವೀತೂ - ಮಕ್ಕಳಿಗೇನೂ ಅಲ್ಲೇ ತಿನಿಸಿಗೊಂಡ ಬಂದ್ನೆಂತ ಬೇಶಾತೂ....ನಂದೇನು ಮೂಳಿ ಜಲಮಾ - ಹಾ - ಹಯ್ಯೋ ಮೈಯ್ಯ - ನೋವ..... ಅಪ್ಪಾ ಶಿವನೇ..... ಸಾವಕಾರ್ರ ಸಾಲಾ ಮುಟ್ಟಿಸಿದ್ದೂ ನಂದ ತಪ್ಪಾತೇನೋ ಎಪ್ಪಾ? ಅಂದಲ್ಲೇ ಶಿಂದಿಗೆ ರೊಕ್ಕಿಲ್ಲಾ ಅಂತ ಮಾರಾಯ ಮಾಡಿಕೊಂಡಾಂವಾ ಮೈ ಮುರಿ ತಳಿಸಿದಾ, ರೊಟ್ಟಿಲ್ದ ಸಾವ ಬರಲೀ ನನಗ-ಶಿವನೇ..... ಇವನ ಹೊಡತಾ ತಾಳಲಾರೆನೋ ಎಪ್ಪಾ ! ಹಾಯ್.... ಹುಶ್.... ಶಿವನೇ.... ಮಕ್ಕಳನ್ನ ಕಟಗೊಂಡು ಈ ಎ ಮನ ಕೈ ಯಾಂದ ಪಾರಾಗಿ ಹೊರಬೀಳಬೇಕಂತ ಏಸ ಬಾರಿ ಇಚಾರಾ ಹಾಕ್ತಿನಿ. ಇಂದಿಲ್ಲಾ ನಾಳೆ ಸುದಾರಿಸ್ಯಾನು ಅಂದ್ರ..... ಆಗಾಣಿಲ್ಲಾ.... ತಲೀಗೆ ಎಣ್ಣಿಲ್ಲಾ..... ಮೈಗೆ ನೀರಿಲ್ಲಾ... ಮಕ್ಕಳಿಗೆ ಅರಿಬಿ ಇಲ್ಲಾ..... ಗಾಳೀ.... ಮಳೀ- ಚಳಿ ಅನ್ನದ ದುಡತಾ ತೆಪ್ಪಿಲ್ಲಾ.... ಬ್ಯಾಡಪಾ ಪರಮೇಸುರಾ! ಇಂದ ಹುಣಿವೀ ಚಂದರಾಮನ ಸಾಕ್ಕಾಗಿ ಹೊಂಡತೇನಿ..... ಇಕಾ..... ಮಾದೇವಾ.... ಇಲ್ಲಿದ್ದಲ್ಲೆ ಅಂವ ಸುಕದಿಂದಿರ್ಲಿ....ನನ್ನ ಕುಂಕಮಕಟ ಆಶೇವಾಗಲಿ....." ಎಚ್ಚರದಪ್ಪಿ ಬಿದ್ದಿದ್ದ ಗಂಡನನ್ನು ಕತ್ತಲೆಯಲ್ಲಿಯೇ ವಂದಿಸಿದಳು. ಒಲೆಯ ಮೇಲೆ ಹಾಗೇ ಬಿದ್ದಿದ್ದ ಆರರಲ್ಲಿ ನಾಲ್ಕು ರೊಟ್ಟಿಗಳನ್ನು ಎತ್ತಿ ತಟ್ಟೆಯಲ್ಲಿಟ್ಟು ಒಂದೆರಡು ನೀರಿನ ಮಗಿಗಳನ್ನೂ ಮಕ್ಕಳ ಒಂದೆರಡು ಹರಕು ಅಂಗಿಗಳನ್ನೂ ಎರಡುಮೂರು ಚಿಂದಿಗಳನ್ನೂ ತೆಗೆದುಕೊಂಡು, ಒಲೆಯ ಹಿಂದೆ ಬಚ್ಚಿಟ್ಟಿದ್ದ 8-10 ಆಣೆ ರೊಕ್ಕಗಳನ್ನು ಲುಂಗಿಗೆ ಸಿಕ್ಕಿಸಿ, ಸಣ್ಣ ಮಗುವನ್ನು ಬೆನ್ನಿಗೆ ಕಟ್ಟಿಕೊಂಡು, ದೊಡ್ಡ ಮಗನನ್ನು ಬೆನ್ನಿಗೆ ಹಚ್ಚಿಕೊಂಡು, ಆ ಹುಣ್ಣಿಮೆಯ ತುಂಬಿದ ಸರಿರಾತ್ರಿಯಲ್ಲಿ ಸದ್ದಡಗಿದಾಗ, ಮನೆಬಿಟ್ಟು ಹೊರಬಿದ್ದಳಾಕೆ. ತಾನು ಹೊರಟದ್ದು ಎಲ್ಲಿಗೆ ಎಂಬ ಅರಿವಿಲ್ಲ ಅವಳಿಗೆ. ಮೈಮೇಲೆಲ್ಲ ಅಲ್ಲಲ್ಲಿ ಬಾಸಳುಗಳೆದ್ದಿವೆ; ನೆತ್ತರು ಸೋರುತ್ತಿದೆ. ಉಟ್ಟ ಹರಕ ಲುಂಗಿ, ಎದೆಯ ಮೇಲೆ ತೊಟ್ಟಿದ್ದ ಒಂದು ಹೊರೆ ಕರಿಮಣಿಗಳು, ನೆತ್ತಿಗೆಣ್ಣೆ ನೀರಿಲ್ಲದೆ ಜಡೆ ಗಟ್ಟಿ ಬಿಗಿದಿದ್ದ ಕೂದಲು ಸಿಂಬೆ, ಹಣೆಗೊಂದು ಬೊಟ್ಟು ಕುಂಕುಮ....ಅದು ಸಹ ಕಣ್ಣೀರು-ನೆತ್ತರುಗಳ ಹನಿಗಳಿಂದೊಡಗೂಡಿ ಮುಖದ ಮೇಲುದುರುತ್ತಿದೆ......ಬಾಡಿ ಬಡವಾಗಿದ್ದ ಅವಳ ಕೈಗಳಲ್ಲಿ ನಾಲ್ಕು ತವರದ ಕಡಗಗಳು. ಈ ಅಲಂಕಾರದೊಂದಿಗೆ, ಆ ಬೆಳದಿಂಗಳ ಮಧ್ಯರಾತ್ರಿಯಲ್ಲಿ, ಕಾಡುಮೃಗಗಳ ಹೆದರಿಕೆಯಿಲ್ಲದೆ, ಮುತ್ತಿನಂಥವೆರಡು ಗಂಡುಮಕ್ಕಳನ್ನು ಕಟ್ಟಿಕೊಂಡು ಬೇಗ ಬೇಗ ಊರು ದಾಟತೊಡಗಿದಳು...... ಅವಳ ಮೈಯ್ಯ ನೋವು, ಮನದ ದುಃಖ ಎಲ್ಲವೂ ಮಾಯವಾಗಿದ್ದವು..... ಹೋಗು ಹೋಗುತ್ತ ಹುಲಿರಾಯನ ಗುಡಿಯಲ್ಲಿ ಹೊಕ್ಕು, ಅವನಿಗಷ್ಟು ವಂದಿಸಿ, ಬಾಲದ ಕಲ್ಲು ಒಡೆದ ಹೊದರಿನಲ್ಲಿಟ್ಟ 8-10 ಆಣೆಗಳನ್ನು ತೆಗೆದುಕೊಂಡು, "ಎಪ್ಪಾ ಹುಲೀ ರಾಜಾ-ಮಕ್ಕಳು ನನ್ನವಲ್ಲಾ.......ನಿನ್ನವೂ" ಎನ್ನುತ್ತ ಊರು ದಾಟುವವರೆಗೆ ಅಡ್ಡ ದಾರಿ ಹಿಡಿಯೋಣವೆಂದು, ಗದ್ದೆಗಳ ಬದುವಿನಗುಂಟ ಮುಂದೆ ಸಾಗಿದಳು.

★ ★ ★

ಗೋಕರ್ಣಕ್ಕೆ ಹೋಗುವ ದಾರಿಗೆ ಹೊಂದಿ ಘಟ್ಟದ ಅಂಚಿಗಿದ್ದ ಒಂದು ಚಿಕ್ಕ ಹಳ್ಳಿಯಲ್ಲಿ ಕಂತೆವ್ವ ತನ್ನ ಶಿಂದಿಗುಡುಕ ಗಾಂಜಾಬಡಕ ಗಂಡನೊಂದಿಗೆ ಇದ್ದದ್ದು. ಅವರು ನಾಯಕ ಮಕ್ಕಳ ಜಾತಿಯವರಂತೆ. ನಾಯಕ ಮಕ್ಕಳೆಂದರೆ ತಾವು ಪಾಂಡವರ ವಂಶಜರೆಂದು ಹೇಳಿಕೊಳ್ಳುತ್ತಾರೆ. ಅವಳ ಹೆಸರು ಕಂತ್ವೆ - ಅಂದರೆ ಕೊಂತೆವ್ವ - ಕುಂತೆವ್ವ - ಕುಂತೀದೇವಿ ಎಂದಿರಬಹುದೆ....? ಗಂಡ ಹಣಿಗೆ ಕೊರೆಯುವದು, ತೋಟ ಹಿಡಿಯುವದು, ಚಾಪೆ ಹೆಣೆಯುವದು ಯಾವ ಕೆಲಸವನ್ನೂ ಮಾಡಲಾರ. ಹಾಗಾದರೆ ಮುತ್ತಿನಂಥ ಮಕ್ಕಳ ಹೊಟ್ಟೆಯ ಗತಿಯೇನು? ಅಲ್ಲಿ ಇಲ್ಲಿ ಗುತ್ತಿಗೆಗಾರರಿಗೆ ದಮ್ಮಯ್ಯ ಗುಡ್ಡೆ ಹಾಕಿ, ಕಂತೆವ್ವ ಗೋಡಂಬಿಗಳನ್ನೂ ಹೂಮಾಲೆಗಳನ್ನು ಹಣಿಗೆಗಳನ್ನೂ ತನ್ನ ತಲೆಯ ಮೇಲೆ ಬುತ್ತಿಯ ಗಂಟಿನೊಡನೆ ತಟ್ಟೆಯಲ್ಲಿಟ್ಟುಕೊಂಡು, ಚಾಪೆಯ ಸುರುಳೆ ಬಗಲಿಗೆ ಹಾಕಿ, ಬೆನ್ನಿಗೊಂದು ಮಗುವನ್ನು ಕಟ್ಟಿಕೊಂಡು, ಬೆನ್ನ ಹಿಂದೆಯೊಂದಿಟ್ಟುಕೊಂಡು ನಸುಕಿನಲ್ಲಿಯೇ ಎದ್ದು ಕೈಗೆ ಸಿಕ್ಕ ಹಿಟ್ಟಿನ ರೊಟ್ಟಿಗಳನ್ನು ಬಡಿದು 1-2 ಗಂಡನಿಗಾಗಿಟ್ಟು ಒಂದೆರಡು ತಾನು ಕಟ್ಟಿಕೊಂಡು, ನೀರ ಮಗಿಯೊಂದಿಗೆ ದಾರಿಗೆ ಬಂದು ಬೆಳಗಾದೊಡನೆ ಒಮ್ಮೆ ಕುಳಿತಳೆಂದರೆ, ಸಾಯಂಕಾಲದ ಏಳು ಗಂಟೆಗೆ ಮತ್ತೆ 'ಸಾಕಪ್ಪಾ ಶಿವನೇ ಜಲಮಾ' ಎನ್ನುತ್ತ ಕಲ್ಲು ಮುಳ್ಳೆನ್ನದೆ, ಹಳ್ಳಿಯ ದಾರೀ ಹಿಡಿದು ಬಂದು ಮನೆ ಕಾಣುವಳು. ಹಗಲೆಲ್ಲ ಆದ ವ್ಯಾಪಾರದಲ್ಲಿ ಅಸಲಿನ ಗಂಟನ್ನು ಸಾಹುಕಾರರಿಗೂ ಗುತ್ತಿಗೆಗಾರರಿಗೂ ಕೊಟ್ಟು, ಮಿಕ್ಕ ಲಾಭದಲ್ಲಿ ಮನೆಯ ಪ್ರಪಂಚದ ಸಾಮಾನು ಕೊಳ್ಳಬೇಕೆಂದವಳ ಇಷ್ಟ ಆದರೆ ಇವಳಲ್ಲಿ

ಒಂದು ಕಾಸು ನೋಡಿದರೆ ಸಾಕು. ಹದ್ದಿನಂತೆ ಜಪ್ಪಿಸಿ ಕುಳಿತಿದ್ದ ಗಂಡ ಎಲ್ಲವನ್ನೂ ಬಡಿದು ಕಸಿದುಕೊಂಡು ಹೊರಹೋದವ, ರಾತ್ರಿ ಹನ್ನೊಂದಕ್ಕೆ ನಾರುತ್ತ ಪ್ರಜ್ಞೆಯಿಲ್ಲದೆ, ಬೈಗಳ ಸುರಿಮಳೆ ಸುರಿಸುತ್ತ ಬರುವ, ಮತ್ತೆ ರೊಟ್ಟಿಯಿಲ್ಲದ ಹಾಳು ಒಲೆಯನ್ನು ಕಂಡೊಡನೆ ಕಿಡಿಕಿಡಿಯಾಗಿ ಕಂತೆವ್ವಳನ್ನು ಕಂಡಕಂಡಂತೆ ಬೈದು ಹೊಡೆಯುವನು, ಒದೆಯುವನು. ಹೊಡೆತದಿಂದ ಚಡಪಡಿಸುತ್ತ ರಾತ್ರಿಯನ್ನು ಕಳೆಯಬೇಕು, ನಸುಕು ಹರಿದೊಡನೆ 'ಅಪ್ಪ ಅಣ್ಣ' ಎಂದು ಅನ್ಯರ ಕಾಲು ಕಟ್ಟಿಕೊಂಡು, ಮಾಲು ತರಲು ಪ್ರಯತ್ನಿಸಬೇಕು! ಅಂಗಡಿಕಾರರಿಗೆ ಹೇಳಿಕೊಂಡು ಸಾಮಾನು ಉದ್ದರಿ ತರಬೇಕು! ಮಕ್ಕಳ ಹಸಿವನ್ನು ಹಿಂಗಿಸಬೇಕು! ಇದು ಅವಳ ನಿತ್ಯದ ಹೋರಾಟ. ಸಾಯಂಕಾಲ ವ್ಯಾಪಾರದಿಂದ ಬಂದ ಹಣದಿಂದ ಉದ್ದರೀ ತೀರಿಸಬೇಕೆಂದರೆ ಹೇಗೋ ಹೊಂಚು ಹಾಕಿ ಬಂದು, ಗಂಡ ಅವನ್ನೆಲ್ಲ ಸೆಳೆದುಬಿಡುವ, ಒಮ್ಮೊಮ್ಮೆ ಅವಳೂ ಹುಲಿರಾಯನ ಗುಡಿಯಲ್ಲಿ ಬಾಲದ ಒಡೆದ ಪದರಿನಲ್ಲಿ 2 3 ಆಣೆಗಳನ್ನು, ಮಗುವಿಗೆ ಅಂಗಾರ ತರುವ ನೆಪಮಾಡಿ, ನಡುವೇ ಎದ್ದು ಇಟ್ಟು ಬರುವಳು. ಆದರೆ ಇಷ್ಟರಿಂದ ಸಾಲ ಹೇಗೆ ಮುಟ್ಟುವದು? ಹೊಟ್ಟೆ ಬಟ್ಟೆ ಅರಿವೆ-ಅಂಚಡಿಗಳಿಗೆ ಉಪಾಯವೇನು?....... ಉದ್ದರಿ ಕೊಡುವವರಾದರೂ ಅದೆಷ್ಟು ದಿನ ಕೊಡುವರು? ಕೊನೆಕೊನೆಗೆ ಗುತ್ತಿಗೆಗಾರರೂ ಸಾಹುಕಾರರೂ ಅಂಗಡಿಕಾರರೂ ಉದ್ದರಿ ಕೊಡದಾದರು. ಕೈಗಡ ಕೊಡುತ್ತಿದ್ದ ನೆರೆಹೊರೆಯ ಅಕ್ಕತಂಗಿಯರಂತೂ ಮೊದಲೇ ಬೇಸತ್ತಿದ್ದರು. ಹೀಗಾಗಿ ಬರುಬರುತ್ತ ಆಗುತ್ತಲಿದ್ದ ಕಂತೆವ್ವನ ಹಾಳು ಬಾಳಿನ ಗೋಳನ್ನು ದೇವರಾಯನೇ ಬಲ್ಲ.

ಅಂದು ಹುಣ್ಣಿಮೆ. ಕರಿಹೊಳೆಯ ದಂಡೆಯ ಮೇಲೆ ಜನರು ಜಾತ್ರೆಯಾಗಿ ಕೂಡುವರು. ವ್ಯಾಪಾರ ಹೆಚ್ಚು ಹೀಗೆಂದು, ಸರಿರಾತ್ರಿಯಲ್ಲಿಯೇ ಎದ್ದು ಮಡಿಕೆಯಲ್ಲಿದ್ದ ಹಿಟ್ಟನ್ನು ತೆಗೆದು, ನಾಲ್ಕಾರು ರೊಟ್ಟಿ ಬಡಿದು, 1-2 ಗಂಡನಿಗಿಟ್ಟು ಮಿಕ್ಕವನ್ನು ತಾನು ಕಟ್ಟಿಕೊಂಡು ಮಧ್ಯಾಹ್ನ ಕೇನೇ ಆಳು ಕಳಿಸಲು ಗುತ್ತಿಗೆಗಾರರಿಗೆ ಹೇಳಿ, ಸಾಷ್ಟಾಂಗ ಹಾಕಿ, ಹೂಮಾಲೆ, ಗೋಡಂಬೆ, ತೆಂಗು, ರಸಬಾಳೆಗಳನ್ನೂ ಹಣಿಗೆಗಳನ್ನೂ ತೆಗೆದುಕೊಂಡು, ಮಕ್ಕಳೊಡನೆ ನದಿಗೆ ಬಂದಳು. ಅಂದು ಸುದೈವಧಿಂದ 3-4 ರೂಪಾಯಿಗಳ ವ್ಯಾಪಾರವಾಯಿತು. ಮಕ್ಕಳಿಗೆ ಹಾಲು ಕೊಂಡು ಕುಡಿಸಿದಳು. 4-6 ರಸಬಾಳೆಗಳನ್ನೂ ಉಳಿಸಿಕೊಂಡು ತಟ್ಟೆಯ ಬುಡಕ್ಕೆ ಬಚ್ಚಿಟ್ಟಳು. ನದಿಯಲ್ಲಿ ಮಿಂದು, ಮಕ್ಕಳಿಗೆ ಸ್ನಾನ ಮಾಡಿಸಿ, ಒದ್ದೆ ಅರಿವೆ ಉಟ್ಟು ರೊಟ್ಟೀ ತಿಂದಳು. ಆರು ಗಂಟೆಯ ಸುಮಾರಿಗೆ, ಗುತ್ತಿಗೆಗಾರರ ಆಳು ಬಂದ. 2 ರೂಪಾಯಿ ಅವನಿಗೆ ಕೊಟ್ಟು 1 ರೂಪಾಯಿ ಅಂಗಡಿಕಾರ ಅಣ್ಣನಿಗಿತ್ತು, ನಾಲ್ಕಾಣೆಯಲ್ಲಿ ಹಿಟ್ಟು-ಉಪ್ಪನ್ನು ತಂದು, ಮಿಕ್ಕ 12 ಆಣೆಗಳನ್ನು ಜಡೆಗಟ್ಟಿದ ಮುಡಿಯಲ್ಲಿಟ್ಟು ತಂದು ಒಲೆಯ ಸಂದಿಯಲ್ಲಿ ಹೂತಿಟ್ಟಳು. ಗಂಡ ರಭಸದಿಂದ ಬಂದ "ಲೇ ಕಂತೀ, ಇಂದ ಯಾಪಾರಾ ಬಾಳಾತಂತ ಊರಂತ ಊರೆಲ್ಲಾ ಸುದ್ದಿ. ಹೂ-ಬಿಚ್ಚು ಉಡೀನ...." ಅವಳಿಗೆ ಮಾತನಾಡಲಿಕ್ಕೆ ಸಹ ಅವಕಾಶ ಕೊಡದೆ ಸೆಳೆದನು. ಅರಿಯದೆ ಟೊಂಕದಲ್ಲಿದ್ದ ಚವಲಿಯೊಂದು ಉರುಳಿತು. ಸಾಕಾಯಿತು ಅವನಿಗೆ. ಹೆಂಡ ಬಿಗಿದು, 1 ಗಂಟೆಯಲ್ಲಿ ಮನೆಗೆ ಬಂದ. ಬಡಿದಿಟ್ಟ 6-7 ರೊಟ್ಟಿಗಳ ಒಲೆಯ ಮೇಲೆ ಹಾಗೇ ಇದ್ದವು. ಉಳಿದ ಹಣಕ್ಕಾಗಿ ಜಗಳ. ಅವಳನ್ನು ಹೊಡೆದು ಬಡೆದು, ನೆತ್ತರು ಸೋರಹತ್ತಲು ಗಾಬರಿಯಾದ; ಮೊದಲೇ ಕುಡಿದವ...... ರಾತ್ರಿಯೂ ಬಹಳವಾಯಿತು. ಹೀಗಾಗಿ ಒಂದು ಮೂಲೆ ಹಿಡಿದು, ಗೊಂಗಡಿ ಹೊತುಕೊಂಡು ಗೊರಕೆ ಹೊಡೆಯುತ್ತ ಮಧ್ಯೆಮಧ್ಯೆ ಬಡಬಡಿಸುತ್ತ ಬಿದ್ದು ಬಿಟ್ಟ ಮಾಡಿದ್ದ ರೊಟ್ಟಿಗಳು ಒಲೆಯ ಮೇಲೆಯೇ ಇದ್ದವು. ಗಂಡ ಉಣ್ಣಲಿಲ್ಲವೆಂದವಳಿಗೂ ಊಟವಿಲ್ಲ, ಆತ ಹೆಂಡ ದಂಗಡಿಯಲ್ಲಿ ಮಸಾಲೆ ಪುಗ್ಗೆಗಳನ್ನು ತಿಂದ ಸಂಗತಿಯು, ಆ ನಿಷ್ಪಾಪ ನಿರ್ಮಲ ಜೀವಕ್ಕೆ ಹೇಗೆ ಗೊತ್ತಾಗಬೇಕು? ಬಾವಿಯೊಳಗಿಂದ ನೀರು ತಂದು ಗಾಯ ತೊಳೆದುಕೊಂಡು, ನೆರಳುತ್ತ ಮಕ್ಕಳೆರಡರ ಮಧ್ಯದಲ್ಲಿ ವಿಚಾರದ ಜೋಕಾಲಿ ಜೀಕುತ್ತ ಬಿದ್ದ ಕಂತೆವ್ವನನ್ನು, ಈಗ ನಾವು ಊರ ಹೊರಕ್ಕೆ ಬೆಳದಿಂಗಳ ಮಧ್ಯರಾತ್ರಿಯಲ್ಲಿ ಹೊರಟಿರುವದನ್ನು ಕಾಣುತ್ತಿದ್ದೇವೆ.

ನಿಜವಾಗಿಯೂ ಹುಲಿರಾಯ ಅವಳ ಮಕ್ಕಳನ್ನು ತನ್ನವೆಂದು ತಿಳಿದಿರಬೇಕು. ಅಂತೆಯೇ ವನದ ಇತರ ಪ್ರಾಣಿಗಳನ್ನು ಸಹ ಕಂತೆವ್ವನ ಹಾದಿಗೆ ಅಡ್ಡವಾಗಿ ಬರಗೊಡದೆ, ಕಾಯುತ್ತ ನಿಂತಿರುವನೇನೋ ಎನ್ನುವಂತೆ, ಆಗಾಗ ದೂರ ನಿಂತು ಮಾಡುತ್ತಿದ್ದ ಆರ್ಭಟೆಯನ್ನು ಬಾರಿ ಬಾರಿ ಕೇಳಿದಳು ಕಂತೆವ್ವ. ದೊಡ್ಡ ಮಗು ಅರ್ಧ ಮೈಲು ಹೋಗುವಷ್ಟರಲ್ಲಿ ನಡೆಯಲಾರದೆ ಅಳತೊಡಗಿತು. ಅದಕ್ಕೆ ತುಂಬ ನಿದ್ದೆಯ ವೇಳೆ. ಬೆನ್ನ ಮೇಲಿನ ಕೂಸಿಗೆ ಮೊದಲಿನಿಂದಲೇ ರೂಢಿಯಿದ್ದುದರಿಂದ ಅದು ಮುದ್ದಾಗಿ ಹಾಗೆಯೇ ಜೋಳಿಗೆಯಲ್ಲಿ ಜೋತುಬಿದ್ದು ನಿದ್ದೆಹೋಗಿತ್ತು ; ಆಯಿತು. ದೊಡ್ಡವನನ್ನು ಹೆಗಲ ಮೇಲೆ ಕುಳ್ಳಿರಿಸಿಕೊಂಡಳು. ಒಂದು ಕೈಯಿಂದ ದೊಡ್ಡ ಮಗನನ್ನು ಒಂದು ಕೈಯಿಂದ ತಟ್ಟೆಯನ್ನು ಸಾವರಿಸುತ್ತ ಇಲ್ಲದ ಹುರುಪಿನಿಂದ ಓಡಹತ್ತಿದಳು. ಬೆಳಗಿನ ಐದಾಗುತ್ತ ಬಂದಿದ್ದಿತು. ದಾರಿಯಲ್ಲೊಂದು ಹಳ್ಳವು ಹತ್ತಿತ್ತು, ಮಕ್ಕಳೂ ಎದ್ದಿದ್ದವು. ತಂಗಳ ರೊಟ್ಟಿಯನ್ನೂ ತಟ್ಟೆಯ ಬುಡದಲ್ಲಿದ್ದ ರಸಬಾಳೆಯನ್ನೂ ತೆಗೆದಳು. ಮಕ್ಕಳ ಕೈಕಾಲು ಮೋರೆ ತೊಳೆಯಿಸಿ, ಎಂದೂ ಹಾಕದೆ ಜತವಾಗಿಟ್ಟ ಹಳೆಯ ಹರಕು ಅಂಗಿಗಳನ್ನು ಹಾಕಿದಳು. ಕೈಕಾಲು ಮೋರೆ ತೊಳೆದುಕೊಂಡು, ಮಕ್ಕಳಿಗೆ ಉಣಿಸಿ, ತಾನೂ ಎರಡು ರೊಟ್ಟಿಗಳನ್ನು ತಿಂದು, ಗಿಡದ ಬುಡದಲ್ಲಿ ಮಕ್ಕಳನ್ನು ಕಟ್ಟಿಕೊಂಡು, "ಇನ್ನು ಮುಂದೇನು ಮಾಡುವದು?" ಎಂದು ಆಲೋಚಿಸುತ್ತ ಕುಳಿತಳು..... "ಗಂಡ ಬೆನ್ನುಹತ್ತಿ ಹುಡುಕುತ್ತ ಬರಬಹುದೆ? ಎಚ್ಚರವಾಗಿ ನೋಡಿ, ಏನೆಂದಿರಬಹುದು? ಆತನನ್ನೂ ಆತನ ಮನೆಯನ್ನೂ ಬಿಟ್ಟು ಬಂದ ಬಳಿಕ ತನಗಾದ ಲಾಭವೇನು ?.... ನಷ್ಟವೇನು?..... ಆತನಿಗಂತೂ ತಾನು ಮನೆ ಬಿಟ್ಟು ಬಂದುದಕ್ಕೆ ದುಡಿತವು ಬೆನ್ನುಹತ್ತಿ ಲಾಭವಾದಂತೆಯೇ ಸರಿ. ತನಗೆ..... ತನಗೆ.....? ನಷ್ಟವೆ....? ನಷ್ಟವಂತೂ ಏನೂ ಇಲ್ಲ.... ಆದರೂ ಗಂಡನೆಂಬುದೊಂದು ಅಮೌಲ್ಯ ವಸ್ತು ಹೆಂಡತಿಗೆ... ಹಾಗೆಯೇ ಹೆಂಡತಿಯೂ ಗಂಡನಿಗೆ ಅಮೌಲ್ಯ ರತ್ನವಲ್ಲವೆ.....? ಅಲ್ಲವೆ?

ಅಂದ ಮೇಲೆ ಆತ ತನಗೆ ಬೆಲೆ ಕೊಟ್ಟಿದ್ದರೆ..... ತಾನವನಿಗೆ ಮೊದಲೇ ಕೊಟ್ಟಿದ್ದಿಲ್ಲವೆ? ಮತ್ತೂ ಕೊಡುತ್ತಿದ್ದಿಲ್ಲವೆ...? ಅಂದ ಮೇಲೆ ಅವನನ್ನು ಬಿಟ್ಟು ಬಂದುದಕ್ಕೆ ನಷ್ಟವೇನೂ ಇಲ್ಲದಿದ್ದರೂ ಲಾಭವೇನು? ಲಾಭವೇನಾದರೂ......?'' ಎರಡೂ ತೊಡೆಗಳ ಮೇಲೆ ತಲೆಯಿಟ್ಟು ಮಲಗಿದ ಎರಡೂ ಮಕ್ಕಳ ಕಡೆಗೆ ಕಣ್ಣು ಹೊರಳಿದವು....... ''ಲಾಭ! ಹವಳ ಮುತ್ತಿನ ಲಾಭ!! ಇದಕ್ಕಿಂತ ಹೆಚ್ಚಿನದಿನ್ನೇನು ಲಾಭವಾಗಬೇಕು? ಆ ಯಮನ ಕೈಯಲ್ಲಿದ್ದರೆ ಇದೇ ರೀತಿ ಇನ್ನೆಷ್ಟು ದಿನ ಬಾಳುತ್ತಿದ್ದವೋ ಏನೋ....... ತನ್ನ ಕೈಯಲ್ಲಿ ಬಂದು ಮುಂದೇನು ಉಣ್ಣುವವೋ ಏನೋ...... ಏನೇ ಆಗಲಿ ಈ ಮಕ್ಕಳಿಗಾಗಿ ತಾನು, ತನ್ನ ದುಡಿತ, ತನ್ನ ಜೀವನ....'' ವಿಚಾರ ಮಾಡುಮಾಡುತ್ತ ಮಕ್ಕಳನ್ನು ಮಗ್ಗುಲಿಗಿಟ್ಟುಕೊಂಡು, ಅಲ್ಲಿಯೇ ಹೊರಳಿಬಿಟ್ಟಳು; ಹಾ, ಹಾ, ಅನ್ನುವಷ್ಟರಲ್ಲಿ ಅವಳಿಗೆ ಗಾಢವಾಗಿ ನಿದ್ರೆ ಹತ್ತಿತು.

★ ★ ★

''ಮಲಗೋ ನನ್ನ ಕಂದಾ, ಜೊಕಮಾರಾ ! ಈಗ ಬರ್‍ತಾರೂ.... ಊಣ್ಣಾಕ ಹಾಕಬೇಕು...... ನಾಳೆ ಗಡಾನ ಎದ್ದು ನಿನ್ನ ಎರೀತೇನೀ...... ನಿನ್ನ ಹುಟ್ಟಿದ ಹಬ್ಬಾ..... ನಿನಗೊಂದು ವರ್ಷಾತೂ ನಾಳೆಗೇ'' .....ತೊಟ್ಟಿಲೊಳಗಿನ ಕೂಸು ತನ್ನ ಹುಟ್ಟಿದ ಹಬ್ಬದ ಸುದ್ದಿ ಕೇಳಿ ಕುಲು ಕುಲು ನಕ್ಕಿತು. ತೂಗುತ್ತಿರುವವಳು ಅದಕ್ಕೊಂದು ಮುತ್ತನ್ನಿತ್ತು ಹೊಚ್ಚಿ ತೊಟ್ಟಿಲ ತೂಗಹತ್ತಿದಳು. ಕೂಸಿಗೆ ಜೊಂಪು ಹತ್ತಿತ್ತು. ತೂಗುತೂಗುತ್ತಿರುವಾಗಲೇ ಅವಳಿಗೂ ನಿದ್ರೆ ಬಂದಿತು...... ಅಲ್ಲಿಯೇ ಬೆನ್ನಿಗೆದ್ದ ಲೋಡಿಗೆ ತಲೆಗೊಟ್ಟು ಕಣ್ಣು ಮುಚ್ಚಿದಳು.

★ ★ ★

ಎರಡು ವರ್ಷಗಳ ಹಿಂದಿನ ಮಾತು. ಸಾರಿಗೆ ಹೊಡೆಯುವ ಚಕ್ಕಡಿಗಾರರು ಒಬ್ಬ ಅನಾಥ ಅಬಲೆಯನ್ನೂ ಅವಳೆರಡೂ ಮಕ್ಕಳನ್ನೂ ತಂದು, ನಮ್ಮೂರ ಗೌಡರ ಸ್ವಾಧೀನ ಮಾಡಿದರು. ಗೌಡರಿಗೆ ಅವಳ ಕತೆ ಕೇಳಿದಂತೆಲ್ಲ ಮರುಕ ಹುಟ್ಟಿ ತಮ್ಮ ದನದ ಕೊಟ್ಗೆಯಲ್ಲಿಯೇ ಅವಳಿಗಿರಲಿಕ್ಕೆ ಇಂಬು ಮಾಡಿಕೊಟ್ಟರು. ಮನೆಯಲ್ಲಿ ಗೌಡಸಾನಿಯು ಹೇಳಿದ ಎಲ್ಲ ಕೆಲಸಗಳನ್ನೂ ಮಾಡುವಳು-ದನಕರುಗಳ ಮೈ ತೊಳೆಯುವದು, ಹಕ್ಕೆಗಳನ್ನು ಹಸನವಾಗಿಡುವದು, ದಾಣಿ-ಮೇವು ಹೊತ್ತು ಹೊತ್ತಿಗೆ ಒದಗಿಸುವದು, ಕುಳ್ಳು ತಟ್ಟುವದು, ಮನೆಯೊಳಗಿನ ಕಸ-ಮುಸುರೆ, ಬಟ್ಟೆ ಸೆಳೆಯುವದು ಇತ್ಯಾದಿ. ಅವಳು ಮನೆಬಿಟ್ಟು ಹೊರಕ್ಕೆ ಕೆಲಸಕ್ಕೆ ಹೋಗಲು ನಾಚಿಕೆಪಟ್ಟುಕೊಳ್ಳುವಳು. ಅವಳ ಉಡುಪು ಬೇರೆ. ಗೌಡರ ಪತ್ನಿ ನೋಡಿ, ತಮ್ಮವೆರಡು ಹಳೇ ಸೀರೆಗಳನ್ನು ಕೊಟ್ಟು ತಮ್ಮ ಹಾಗೆ ಮೈತುಂಬ ಉಟ್ಟುಕೊಂಡು, ತಲೆಯ ಮೇಲೆ ಸೆರಗು ಹೊತ್ತುಕೊಳ್ಳಲು ಕಲಿಸಿದರು. ಈಗ ಅವಳೂ ಅವಳ ಮಕ್ಕಳೂ ಹೊಟ್ಟೆ ತುಂಬ ಉಣ್ಣುವರು, ತಿನ್ನುವರು, ಬೆಚ್ಚನ್ನ ಕಂಬಳಿಗಳನ್ನು ಹೊತ್ತುಕೊಂಡು ಮಲಗುವರು. ದುಡಿತದ ಚಿಂತೆಯೇ ಚಿಂತೆ. ಬಂದ ಹದಿನೈದು ದಿನಗಳಲ್ಲಿಯೇ ಗೌಡರ ಮನೆಯ ರೀತಿ-ನಡತೆಗಳನ್ನು ತಿಳಿದುಕೊಂಡು, ಒಳ್ಳೆಯ ಭಯಭಕ್ತಿಯಿಂದಲೂ ವಿನಯದಿಂದಲೂ ಎಲ್ಲರನ್ನೂ ಮೆಚ್ಚಿಸಿ ನಡೆಯಹತ್ತಿದಳು. ಈಗವಳು ಎಲ್ಲರೊಡನೆ ಮನಸು ಬಿಚ್ಚಿ ಇರಹತ್ತಿದಳು. ಒಳಹೊರಗೆ ಕೆಲಸಕ್ಕೆ ಹೋಗಹತ್ತಿದಳು. ಆರಂಬದ ಮನೆ. ದನಗಳಿಗೆ ಊರ ಹೊರಗಿನಿಂದ ನೀರು ಹೊತ್ತು ತರಬೇಕಾಗುತ್ತಿತ್ತು, ಬರಿ ಊರ ಹೊರಗಿನದೇಕೆ 1-2 ಹರದಾರಿಯ ಮೇಲಿದ್ದ ಯಾವ ಬಾವಿಯ ನೀರನ್ನೂ ತರಲು ಅವಳಲ್ಲಿ ಶಕ್ತಿಯಿದೆ-ಧೈರ್ಯವಿದೆ-ಹುರುಪಿದೆ! ಆಳುಮಗ ಮಾದೇವ ಹೊಲಕ್ಕೆ ಉಪವಾಸ ಹೋದಾಗ, ರೊಟ್ಟಿಯನ್ನು ಕಟ್ಟಿಕೊಟ್ಟರೆ ಒಯ್ದು ಮುಟ್ಟಿಸುವಳು; ಬರುವಾಗ ಒಂದು ಹೊರೆ ಮೇವನ್ನೋ ಹುಲ್ಲನ್ನೋ ತರುವಳು. ತಿಂಗಳೊಪ್ಪತ್ತಿನಲ್ಲಿ ಎಲ್ಲರ ಬಾಯಿಯಲ್ಲೂ ಅವಳ ಗುಣಗಾಯನ ಕೇಳುವಂತಾಯಿತು - ''ಗೌಡರ ಧೊರಿ ಎಲ್ಲಿಂದ ತಂದಿದ್ದಾನಪಾ ಈ ಲಕ್ಷ್ಮಿನ್ನ?'' ಒಂದು ದಿನ ಗೌಡಿತಿಯು ಅವಳ ಹೆಸರನ್ನು ಕೇಳಿದಾಗ ತಟ್ಟನೆ ಅವಳ ಬಾಯಿಯಿಂದ ತನ್ನ ತವರುಮನೆಯ ''ಗೌರಿ'' ಎಂಬ ಹೆಸರು ಬಂದಿತು. ಅಂದಿನಿಂದ ಎಲ್ಲರೂ ಗೌರಮ್ಮನೆಂದು ಕರೆಯಹತ್ತಿದರು. ಬರುಬರುತ್ತ ಮಾದೇವಪ್ಪನ, ತನ್ನ ತನ್ನ ಮಕ್ಕಳ - ಅಡಿಗೆ ಮಾಡುವ ಕೆಲಸವೂ ಹತ್ತಿತು. ಮಾದೇವನು ಬೇಡರವ. ಜೀತದಿಂದ ಗೌಡರ ಮನೆಯಲ್ಲಿ 6-7 ವರ್ಷಗಳಿಂದಿದ್ದ. ಊಟಕ್ಕೆ ಹಾಕಿ, ಕಂಬಳಿ ಅರಿವೆ ಜೋಡುಗಳನ್ನು ಕೊಟ್ಟು ಅವನ ಹೆಸರಿನಿಂದ ಗೌಡರು ಬ್ಯಾಂಕಿನಲ್ಲಿ ವರ್ಷಕ್ಕೆ 40 ರಂತೆ 200-300 ರೂಪಾಯಿಗಳನ್ನು ಕೂಡಹಾಕಿದ್ದರು. ''ಮಾದೇವಾ, ಬೇನೆ ಬೇಸರಿಕೆ ಬಿದ್ದಾಗ ಆರೈಕೆ ಮಾಡಲಿಕ್ಕಾದರೂ ಉಡಿಕೆಯಾಗು'' ಎಂದು, ಅವನಿಗೆ ಗೌಡರು ಆಗಾಗ ಅನ್ನುವರು. ''ಛೆ ಯಪ್ಪಾ ಉಡಕೀ ಯಾಕಿನ್ನ ಆಗಾಣೇನ್ರಿ ಧೊರಿ! ನನ್ನ ಜೀವ ಅರದಾಳು!'' ಎಂದಿದ್ದ. ಗೌಡರೇ ಮೊದಲ ಮದಿವೆ ಮಾಡಿದ್ದರು. ಚೊಚ್ಚಲ ಬಾಣಂತಿತನದಲ್ಲಿ ಹಡೆದ ಹತ್ತು ದಿನಗಳೊಳಗಾಗಿಯೇ ಮಗುವಿನೊಡನೆ ಪರಲೋಕ ಕಂಡಿದ್ದಳು. ಅಂದಿನಿಂದ ಮಾದೇವ ತನ್ನ ಎರಡನೇ ಮದುವೆಗಾಗಿ ಹಣ ಕೂಡಿಸಿಡುತ್ತಿದ್ದ.

ಗೌರಮ್ಮ ರೊಟ್ಟಿಯನ್ನು ಇನ್ನೂ ಏತಕ್ಕೆ ತರಲಿಲ್ಲವೆಂದು ಮಾದೇವ ದಾರೀ ಕಾಯುತ್ತಿದ್ದಾನೆ. ಹೊತ್ತೇರಿ ಹೋಗಿದೆ. ದೂರದಲ್ಲಿ ಬಳೆಗಳ ಸಪ್ಪಳವಾದಂತಾಯಿತು. ''ಗೌರಮ್ಮ !'' ಎಂದು ಕೂಗಿದ. ''ಓ, ಬಂದೆ''ಯೆಂದಳು. ''ಏಸು ಹೊತ್ತು ಮಾಡಿದಿ ರೊಟ್ಟೀತರಾಕ!'' ''ಹೂಂ..... ನಿಂದೆಲ್ಲಾ ಚಾಕರೀ ಮಾಡೂದಕ ತಿಂದೇನೇನ ನಿನಗಂಟೂ?... ನಂದೆಲ್ಲಾ ಕತೀನ ನೆನಿಸಿಗೊಂಡು, ಅತಗೊಂತ ಕುಂತ ಬಿಟ್ನೀ ! ರೊಟ್ಟಿ ಮಾಡಿಟ್ಟಿದ್ದೆ. ಹಿರೇಮಗಾ ಕೇಳಿದಾ, 'ಅಪ್ಪಗ ರೊಟ್ಟಿ ಒಯ್ತೀಯೇನವ್ವಾ' ಅಂತ! ಅವರಪ್ಪನದೇನ ದೆಸಿ ಆಗೇದ ಯಾರೂ ಬಲ್ಲರೂ...? ಎಷ್ಟ ಬಡೀತಿದ್ದಾ.... ಎಷ್ಟ ಬೇಯೂದ ಮತ್ತೂ... ಒಂದ ರೊಟ್ಟಿ ಅಂವನ ಸಲುವಾಗಿಟ್ಟ ಬರ್‍ತಿದ್ದೇ.... ಹ್ಯಾಗದಾನೊ ಎಲ್ಲೆದಾನೊ, ಹೊಟ್ಟೀ ನೆತ್ತೀ ಯಾರ ನೋಡ್ತಿದ್ದಾರೂ......'' ''ಹೂ.... ಹೋಗ್ಲಿ ಬಿಡ! ನಿನ್ನ ಹಿರೇ ಮಗಾ ಏನಂದಾ....?'' ಮುಗುಳ್ನಗೆ ನಗಹತ್ತಿದ ಮಾದೇವ. ಅವಳಿಗಿಂತ 6-7 ವರ್ಷಕ್ಕೆ ದೊಡ್ಡವ.

ಅವನದೂ ಎಳೆ ಪ್ರಾಯ. ಗೌರಮ್ಮನ ಕೈಯ್ಯ ಅಡಿಗೆ ರುಚಿರುಚಿಯಾಗಿ ಅವನಿಗೆ ಸುಖವುಂಟಾಗುತ್ತಿತ್ತು. ಉಳಿದ ವೇಳೆ ಕಳೆಯಲು ಬಂಗಾರದಂತಹ ಮುದ್ದು ಮಕ್ಕಳು. ಪೇಟೆಗೆ ಹೋಗುವಾಗ, ತೋಟಕ್ಕೆ ಹೋಗುವಾಗ, ಅಡ್ಡಾಡ್ಲಿಕ್ಕೆ ಹೋಗುವಾಗ, ಆ ಮಕ್ಕಳನ್ನು ಕಟ್ಟಿಕೊಂಡೇ ಹೊರಡುವವನು ಮಾದೇವ. ಹೀಗಾಗಿ ಅವುಗಳಲ್ಲಿ ಇವನ ಬಗ್ಗೆ ಪ್ರೇಮಾದರಗಳೂ ಇವನಲ್ಲಿ ಅವುಗಳ ಬಗ್ಗೆ ವಾತ್ಸಲ್ಯವೂ ಬೆಳೆಯುತ್ತಲಿದ್ದವು. ಮಗನು ಏನೆಂದ?' ಎಂದು ಮಾದೇವ ಕೇಳಿದೊಡನೆ, ಅವನ ಮಗುಳ್ನಗೆಯಿಂದವಳಿಗದರ ಅರ್ಥವಾಯಿತು...... ಬಿರುಗಣ್ಣಿನಿಂದವನನ್ನು ದುರುಗಟ್ಟಿ ನೋಡಿದಳು. ಸುತ್ತಲೂ ಒಮ್ಮೆ ಮುಖ ತಿರುವಿದಳು. ಅವನು ಅಂದ ನಗೆಮಾತುಗಳನ್ನಾರೂ ಕೇಳಲಿಲ್ಲವೆಂದು ಸಮಾಧಾನವಾಯಿತು. ಅವನಿಗೆ ಉಣಬಡಿಸಿ, ಕುಳ್ಳು ತಟ್ಟಲು ಹೋದಳು. ಹತ್ತು ನಿಮಿಷಗಳಲ್ಲಿ ಮಾದೇವ ಚೀರಿದಂತೆ ಕೇಳಿತು. ಬಂದು ನೋಡುತ್ತಾಳೆ-ಮೇವು ಕೊಯ್ಯುವಾಗ, ಅಂದೇ ಸಾಣೆ ಹಿಡಿಸಿದ ಕುಡುಗೋಲಿನಿಂದಾತನ ಕಾಲು ಕೊಯಿದ್ದದೆ. ಗಾಯವು ಹೆಚ್ಚಾದುದರಿಂದ ನೆತ್ತರು ಸೋರುತ್ತಿದೆ. ಮೀನುಗಂಡದಲ್ಲಿ ಕುಡುಗೋಲು ಆಳವಾಗಿ ಹೊಕ್ಕಿತ್ತು....ಭರ್ರನೆ ತನ್ನ ಸೀರೆಯನ್ನು ಹರಿದು, ಮಗಿಯಿಲ್ಲಿ ತೊಯ್ಯಿಸಿ, ಗಾಯಕ್ಕೆ ಬಿಗಿದಳು. ಆತನ ಕಣ್ಣಿಗೆ ಕತ್ತಲೆ ಕವಿಯಹತ್ತಿ ಒಮ್ಮೆಲೆ ನೆಲಕ್ಕೆ .ಕುಸಿಬಿದ್ದನು. ಮನದಲ್ಲಿ ಏನೇ ಇರಲಿ, ಜನರೇನೆಂದಾರೆಂಬ ಭಯ. "ಜನಾ ಅಂತ, ದನಾ ಅಂತ ಏನಾರ ಅಂದುಕೊಳ್ಳಲಿ- ನಾ ಸುಮ್ಮಗ್ರ ಇರಲಾರೆ....." ಆತನ ತಲೆಯನ್ನು ತೊಡೆಯ ಮೇಲಿರಿಸಿಕೊಂಡು, ನೆತ್ತಿಗೆ ನೀರು ಬಡಿದು, ಒಲ್ಲಿಯಿಂದ ಗಾಳೀ ಹಾಕುತ್ತಲೇ ನೆರೆ ಹೊಲದ ಸಂಗಣ್ಣನನ್ನು ಕೂಗಿ ಕರೆದಳು. ಆತ ಬಂದ "ಎಣ್ಣಾ, ಸರಕ್ಕನ ಹೋಗಿ, ಗೌಡ್ರಿಗೆ ತಿಳಸು.... ಇಕಾ, ಕಾಲಾಗಿಂದ ಧಾರಿ ಧಾರಿ ರಗತಾ ಸೋರಾಕ ಹತ್ತೇತಿ..." ಇಬ್ಬರೂ ಒಂದೆರಡು ನಿಮಿಷ ವಿಚಾರಿಸಿ ಸಂಗಣ್ಣನ ಬಂಡಿಯಲ್ಲಿ ಆತನನ್ನು ಹಾಕಿ, ಅವನನ್ನು ಗೌಡರ ಮನೆಗೆ ಮುಟ್ಟಿಸಿದರು. ಆಳಿನ ಆರೈಕೆ ಮಾಡುವವರಾರು ? ಸುಮ್ಮನೆ ಬಿಟ್ಟರೆ ಬಂಗಾರದಂಥ ಆಳು ವ್ಯರ್ಥವಾಗಿ ಸಾಯುವನು. ಗೌಡರು, "ಗೌರಮ್ಮಾ ! ನಾವೆಲ್ಲ ದುಡ್ಡು ವೆಚ್ಚಮಾಡಬಹುದು, ಔಷಧ-ಸಾಮಾನು ಕೊಡಿಸಬಹುದು. ಆರೈಕೆಯೆಲ್ಲಾ ನೀನೇ ಮಾಡಬೇಕಮ್ಮಾ !" "ಆಗಲಿ, ತಂದೇ, ನಾನೂ ಪರದೇಶಿ..... ದಿಕ್ಕಿಲ್ಲದಾಕಿ ಮತ್ತೇನೂ ಇಲ್ಲಾ.... ಅಂವನೂ ಹರೇದವ, ನಾನೂ ದಿಕ್ಕಿಲ್ಲದಾಕಿ, ಮಂದಿ ಏನಂದಾರೂ ಅಂತ ಅಟ ವಿಚಾರಾ ಬಂದು, ಜೀವ ಹೆದರತೈತಿ...." "ಏನೂ ಹೆದರ ಬ್ಯಾಡಾ, ತಂಗೀ. ಅವಂನೂ, ಅನಾಥಾ. ಈ ವೇಳೆಗೆ ಜನರ ಅನ್ನುವಿಕೆಯ ಕಡೆಗೆ ಲಕ್ಷ ಕೊಡಬೇಡ ಅನ್ನುವವರ ಬಾಯಿಗೆ ಬೀಗ ಹಾಕುವ ಕೆಲಸ ನನ್ನದು..." ಗೌರಮ್ಮ ಸೆರಗು ಸಾವರಿಸುತ್ತ, ನಮ್ರವಾಗಿ ಹೂಗುಟ್ಟಿ ಒಳಕ್ಕೆ ಹೋದಳು. ಆವಳ ಹಿತ್ತಿಲ ಮನೆಯಲ್ಲಿಯೇ ಒಂದು ಹೊರಸು ಹಾಕಿ, ಮಾದೇವನನ್ನು ಬೆಚ್ಚಗೆ ಹಾಸಿ ಮಲಗಿಸಿದರು. ವೈದ್ಯರ ಔಷದ ಉಪಚಾರಗಳು ನಡೆದವು. ಹಗಲು-ರಾತ್ರಿಯೆನ್ನದೆ ಗೌರಿಯು ಮಾದೇವನ ಚಾಕರಿ ಮಾಡಹತ್ತಿದಳು. ಆತನಿಗೆ ನಿದ್ರೆ ಬಂದಾಗಷ್ಟು ಗೌಡರ ಮನೆಯ ಉಳಿದ ಕೆಲಸಗಳನ್ನು ಸಾವರಿಸುವಳು. ಹೊರಗಿನ ಕೆಲಸಕ್ಕೆ 2-3 ತಿಂಗಳ ಮಟ್ಟಿಗೆಂದು ಒಂದಾಳನ್ನೂ ಗೌಡರು ಇಟ್ಟಿದ್ದರು. ಗಾಯದ ಬಾಯಿಮುಚ್ಚಿಕೊಳ್ಳಲು 15-20 ದಿನಗಳು ಬೇಕಾದವು. ಮಲಗಿದ್ದಲ್ಲಿಂದಲೇ ದಿನದಲ್ಲಿ 1-2 ಸಾರಿ ಮಕ್ಕಳನ್ನು ಮಾತನಾಡಿಸುವನು ಮಾದೇವ. ಅವಕ್ಕೆ ಎರಡು ಪಾಟಿಗಳನ್ನು ತಂದು ಕೊಟ್ಟಿದ್ದನು. ಗೌಡರ ಮಕ್ಕಳ ಬಾಯಿಯಿಂದ ಕೇಳಿದ ಕಂದ ಪದ್ಯಗಳನ್ನು ಮಕ್ಕಳು ಅನ್ನುತ್ತ ಬಂದು ಅವನ ಬಳಿಯಲ್ಲಿ ಕುಳಿತವೆಂದರೆ ಆತನಿಗೆ ಹಿಡಿಸಲಾರದ ಹಿಗ್ಗುಂಟಾಗುವದು. ಈಗ ತನ್ನ ಮೇಲೆ ಗೌರಮ್ಮನ ತೀರಿಸಲಾರದಂಥ ಉಪಕಾರವಾಗಿದೆ. ಗೌಡರೂ ಗೌಡಿತಿಯೂ ಹೋಗುತ್ತ-ಬರುತ್ತಿರುವಾಗ, ಕೋಣೆಯಲ್ಲಿಣಿಕಿ ನೋಡಿ, "ಮಾದೇವಾ, ಗೌರಮ್ಮನ ಪುಣ್ಯದಿಂದ ಮತ್ತೆ ಹುಟ್ಟಿಬಂದಂತಾತಪ್ಪಾ ನೀನು!" ಎನ್ನುವದನ್ನೂ ಗೌರಮ್ಮ ಎಷ್ಟೋ ಬಾರಿ ಕೇಳಿದಳು. ಮಾದೇವನಿಗೆ ಈಗ ಗೌರಿಯೆಂದರೆ ಪಂಚಪ್ರಾಣ ! ರಾತ್ರಿಯ ಒಂದು ಬಡಿದಿದೆ. ಎಡಬಲಕ್ಕೆ ಮಕ್ಕಳನಿಟ್ಟುಕೊಂಡು, ಗೌರಮ್ಮ ಹೊರಳಿದ್ದಾಳೆ. ಹಣ್ಣಿಗಿನ್ನೂ ನಿದ್ರೆಬರದಿದ್ದರೂ ರೆಪ್ಪೆ ಮುಚ್ಚಿದ್ದಳು ಗೌರಮ್ಮ ! "ಗೌರಾ!......." ಗಡಬಡಿಸಿ ಎದ್ದಳು ; ಒಂಟಿ ಹೆಸರಿಟ್ಟ ನೀರನನ್ನು ಬಟ್ಟಲಿಗೆ ಸುರುವಿ, ಆತನ ಮುಂದೆ ಹಿಡಿದಳು. ನೀರು ಕುಡಿದ. "ಗೌರಾ! ಕುಂತುಕೊ! ನಿನ್ನ ಸಂಗಾಟ ಬಾಳ ಬಾಳ ಮಾತಾಡಬೇಕೂ ಅಂತೇನಿ." ಅಂಜಂಜುತ್ತ, ಹೊರಸಿನ ತುದಿಗೆ ಮೆಲ್ಲಗೆ ಕುಳಿತಳು. ಆತನ ಕಾಲಿನ ಕಡೆಗೆ ಅವಳ ದೃಷ್ಟಿ "ದೇವರೆ, ಒಮ್ಮೆ ಈತ ನನ್ನ ಕೋಣೆ ಬಿಟ್ಟು ಹೋಗಲಿ.... ಕೋಣೆ ಬಿಟ್ಟು ಹೋದರೂ ಹೃದಯ ಬಿಟ್ಟು ಹೋಗಬಹುದೆ?" ವಿಚಾರ ತರಂಗಗಳ ಮೇಲೆ ತರಂಗಗಳು ಬಂದು ಮನಸ್ಸು ಹೊಯ್ದಾಡಹತ್ತಿ ಅಸ್ಥಿರವಾಯಿತು. ಕಣ್ಣಲ್ಲಿ ನೀರು ತುಂಬಿತು. ಮಾದೇವನೆಂದ, "ಗೌರಾ! ತೀರ್ಸದಂತಾ ಉಪಕಾರದ ಹೊರೀ ಹಾಕಿದೀ ನನ್ನ ಮ್ಯಾಗ! ನಾ ಹ್ಯಾಂಗ ತೀರಸಲಿ? ದುಡ್ಡಿನ ಉಪಕಾರಾ ಆಗಿದ್ರ, ಲೆಕ್ಕಾ ಇಟ್ಟು ಜಲಮಾ ಎಲ್ಲಾ ದುಡದುಕ್ಯಾರಾ, ನಿನ್ನ ಹೊರೀ ಇಳಸ್ತಿದ್ದೇ.... ಆದರ ಈ ಚಾಕರೀ ಪುಣ್ಯೇದರಿಣಾ ಹ್ಯಾಂಗ ತೀರಸಲಿ....? ನಿನ್ನ ಮಕ್ಕಳನ್ನ ಎರಡೂ ನನಗೆ ಕೊಟ್ಟ ಬಿಡು! ನಾ ಜ್ವಾಪಾನ ಮಾಡಿ, ಇದ್ಯೇವ ಕಲಿಸಿ, ಎಲ್ಲೆರ ದುಡದು ತಿನ್ನೂ ಹಾಂಗ ಮಾಡತೇನಿ....." ಗೌರಿಯ ಕೈಯಲ್ಲಿ ತನ್ನ ಕೈಯಿಟ್ಟು "ಏನ ಮಾಡಿದರೂ ಈ ಉಪಕಾರ ತೀರೀತs ಗೌರಾ?" ಎಂದ "ಕಾಲಿಗೆ ಕುಡಗೋಲು ಬಡದಾಗನ ಗೌಡ್ರ ಸಂಕಾ ನೀ ಸಾಯಿತೀ ಅಂತ ಬೆದರಿದ್ರೂ.... ಆದರ ಮತ್ತ ಈ ಮುಗುಳ್ನಗಿ ಮತ್ತ ನನಗ ನೋಡಾಕ ಸಿಕ್ತು, ನಾ ಮಾಡಿದ್ದರ ಪಲಾ ಇದಕ್ಕೂ ಹೆಚ್ಚಿಗಿನ್ನೇನ ಸಿಗಬೇಕು...? ಅಲ್ದ..... ನೀಯೇನ ನನಗ ಕಡಿಮಿ ಮಾಡಿತಿದ್ಯಾ....?" "ಗೌರಾ? ನಾವೊಂದ ಮಾತ ಕೇಳ್ಯಾ.....? ಇಲ್ಲಾ ಅನ್ನಾಕಿಲ್ಲ...'" ಗೌರಿ ಸುಮ್ಮನಿದ್ದಳು. "ನಾವಿಬ್ಬರೂ....." ಗೌರಿಯ ದೃಷ್ಟಿ ಮಕ್ಕಳ ಕಡೆಗೆ ಹೋಗಿ, ಕಣ್ಣೊಳಗಿಂದ ಕೃತಜ್ಞತೆಯ ನೀರು ಹರಿಯಹತ್ತಿತು.

ಅತ್ತ ಅದೇ ಸಮಯಕ್ಕೆ ಗೌಡರೂ ತಮ್ಮ ಪತ್ನಿಯ ಕೂಡ ಇದೇ ಬಗೆಗೆ ಆಲೋಚನೆ ಮಾಡತೊಡಗಿದ್ದರು. "ನಮಗ ಅಂವನೂ ಬೇಕು, ಆಕೀನೂ ಬೇಕು.... ತಣ್ಣಗ ಇಬ್ಬರದೂ ಉಡಿಕೀ ಮಾಡಿಬಿಡೋಣ....." "ನೀವು ಹೇಳ್ರೀ, ನಿಮ್ಮ ಮಾತು ಮೀರಿ, ಇಬ್ಬರೂ ಹೋಗಲಿಕ್ಕಿಲ್ಲಾ....." "ಹೀಗೆ ಮಾಡೋಣ! ನೀನು ಅವಳಿಗೆ ಹೇಳು, ನಾನು ಅವನಿಗೆ ಹೇಳುತ್ತೇನೆ.... ಅಂ....?" ಮರುದಿನ ಗೌರಿಯು ಕಸಮುಸುರೆಗಳಲ್ಲಿ ತೊಡಗಿರುವಾಗ ಗೌಡಿತಿಯು ಹಿತ್ತಿಲಿಗೆ ಹೋಗಿ, ಮೆಲ್ಲಗೆ ಮಾತು ತೆಗೆದು, ಅವಳ ಒಪ್ಪಿಗೆ ಪಡೆದು ಬಂದಳು. ಅದರಂತೆಯೇ, ಆಕೆ ಹಿತ್ತಿಲಲ್ಲಿರುವಾಗಲೇ ಗೌಡರು ಅವನ ಕ್ಷೇಮ ಸಮಾಚಾರಕ್ಕೆ ಹೋದಂತೆ ಹೋಗಿ, "ಒಳ್ಳೆಯ ಹುಡುಗಿ, ಕೈಹಿಡಿ, ಮಾದೇವಾ! ನಾ ಎಲ್ಲಾ ಮಾಡಸ್ತೇನಿ....." ಎಂದರು. ಮಾದೇವ ಕಣ್ಣಲ್ಲಿ ನೀರು ತಂದು "ನಾ ಯೇನ ನಿಮ್ಮ ಮಾತಿನ ಹೊರಗದೇನೇನ್ರಿ ಧನ್ಯಾರ? ನೀವs ನನ ತಾಯಿ ತಂದಿ ಅಲ್ರೇಯಪ್ಪಾ? ಪರದೇಶಿ ಮಗಾ ನಾನೂ...." "ಅವಳೂ ದಿಕ್ಕಿಲ್ಲ ದಾಕೀ... ಜನರ ಆಡಿಕೀದೂ ಆ ಮೇಲೆ ಹೆದರಿಕಿಲ್ಲೇನಪಾ?" "ನೋಡ್ರಿ ತಮ್ಮ ಮನಸಿಗೆ ಹ್ಯಾಂಗ ಅನಸ್ಯತಿ ಹಾಂಗರಿ...." ಅಂತೂ ಗೌಡರೂ ಗೆದ್ದರು.... ಗೌಡಿತಿಯೂ ಗೆದ್ದಳು.

ಒಂದು ತಿಂಗಳ ಆರೈಕೆಯಿಂದ ಮಾದೇವ ಎದ್ದು ಓಡಾಡಹತ್ತಿದ. ಗೌರಿಯು ಹೆಸರಿಗೆ ಎರಡು ಸರ ಕರಿಮಣಿಗಳನ್ನಿಟ್ಟೇ ಇದ್ದಳು ಕೊರಳಲ್ಲಿ. ಅತ್ತ ಕಡೆಗೆ ಯಾರ ಲಕ್ಷವಿರಬೇಕು? ಮರುವಾರವೇ ಗೌಡರ ಮನೆಯವರು ಅದಾವುದೋ ದೇವಿಯ ಜಾತ್ರೆಗೆಂದು ಹೊರಡುವವರು. ಕುಟ್ಟೋಣ, ಬೀಸೋಣ, ಬಗೆಬಗೆಯ ಫರಾಳದ ಜಿನಸುಗಳನ್ನು ಮಾಡೋಣ, ಎಲ್ಲವೂ ಸಾಗಿತು. ಅರಿವೆ ಅಂಚಡಿಗಳನ್ನು ಒಗೆಯುವದು ನಡೆಯಿತು. ನಾಲ್ಕಾರು ಚಕ್ಕಡಿಗಳನ್ನು ಸವಾರಿ ಹೊರಡಿಸಿದರು. ಗೌರಿಯೂ ಗೌರಿಯ ಮಕ್ಕಳೂ ಹೊಸ ಬಟ್ಟೆಗಳನ್ನು ಕಂಡರು. ದೇವಿಗೆ ಹೋಗಿ ಮುಟ್ಟಲು ನಡುವೆ ಒಂದು ದಿನದ ವಸ್ತಿಯನ್ನು ಹೊಡೆಯಬೇಕಾಗುವದು. ಅಂದರೆ ಎರಡು ದಿನ ಮುಂಚಿತವಾಗಿ ಹೊರಡಬೇಕಿತ್ತು. ಆ ಪ್ರಕಾರ ಇವರೆಲ್ಲ ನಿಬ್ಬಣದಂತೆ ಶೃಂಗಾರವಾಗಿ ಸಾಯಂಕಾಲಕ್ಕೆ ಹೊರಟರು. ಮರುದಿನದ ಬೆಳಗಿನವರೆಗೂ ಸವಾರಿ ಸಾಗಿದ್ದವು. ನಸುಕಿನಲ್ಲಿ ಒಂದು ಬಾವಿಯನ್ನು ನೋಡಿಕೊಂಡು, ಒಂದು ಸಣ್ಣ ಬಸವಣ್ಣ ಗುಡಿಯ ಹತ್ತಿರ ಬೀಡು ಬಿಟ್ಟರು, ಮಾದೇವ ಕೊಳ್ಳು ಹರಿದು, ಚಕ್ಕಡಿಗಳ ಸುತ್ತಲೂ ಗುಡಾರ ಕಟ್ಟಿ ಹುಲ್ಲು ತೆಗೆದು, ಥಳಿ ಹೊಡೆದು ಅಣಿಮಾಡಿಕೊಟ್ಟು, ಎತ್ತಿನ ಮೈ ತೊಳೆಯಲು ಉಳಿದ ಜತೆಗಾರರೊಡನೆ ಹೋದ. ಇತ್ತ ಗೌರಿಯು ಮಕ್ಕಳನ್ನು ಗೌಡರ ಮಕ್ಕಳೊಂದಿಗೆ ತಿಂಡಿ ತಿನ್ನಲು ಬಿಟ್ಟು ಒಡತಿಗೆ ಗಂಟು-ಗದಡಿಗಳನ್ನು ಬಿಚ್ಚಿ ಬಿಚ್ಚಿ ಹಿಟ್ಟು ಆಕಿಗಳನ್ನು ಸಿದ್ಧಪಡಿಸಿ ಕೊಡಹತ್ತಿದಳು. ಒಡತಿಯು ಮಿಂದು ಬಂದಳು. ಇನು ಹೋದಳು ಗೌರಮ್ಮ ಮಕ್ಕಳನ್ನು ಕರಕೊಂಡು ಬಾವಿಗೆ. ದಾರಿಯಲ್ಲಿ ಬಸವಣ್ಣನಿಗೆ ನಮಸ್ಕರಿಸಿ ಮುಂದೆ ಹೊರಡಬೇಕೆಂದು ತಿರುಗಿದಳು. ಬಸವಣ್ಣನ ಗುಡಿಗೆ ನೂರು ಹೆಜ್ಜೆ ದೂರ ಒಬ್ಬ ಭಿಕ್ಷುಕನೋ, ಹುಚ್ಚನೋ ಗಿಡದ ಬುಡದಲ್ಲಿ ಮಲಗಿ, "ಸಾಯತೇನ್ರ್ಯೋ! ಎಂದೂ ಹೀಂಗ ಮಾಡೂದುಲ್ಲಾ ನಾನೂ..... ಒಮ್ಮೆ ನಿನ್ನ ಮಾರಿ ತೋರಸೂ......" ಎಂದು ನರಳುತ್ತಾ ಬಿದ್ದಿದ್ದನು. ಸುತ್ತು ನಿಂತು ಇದನ್ನು ನೋಡುತ್ತಿದ್ದ ಉಡಾಳರು ಅವನ ಮೈಮೇಲೆ ಕಲ್ಲು ಒಗೆಯಹತ್ತಿದರು. ಗೌರಿ ಇದನ್ನೆಲ್ಲ ಕೇಳಿ ನೋಡೋಣವೆಂದು ಓಡಿದಳು. "ಯಾರವನು?" "ಯಾವನೋ.... ಹೊಲೆಯ" ಎಂದನೊಬ್ಬ "ಹಯ್ಯೋ, ಯಪ್ಪಾ ! ನಾನs ನನ್ನ ಕಾಲ್ಯಾಗ ಕಲ್ಲು ಹಾಕ್ಕೊಂಡೆ.... ಹೆಂತಾ ಗರತಿ ಗೌರ್‍ಯಾಗಿದ್ದಾಕಿ.....ನನ ದಶಿಂದ... ತನ್ನ ಜಲಮಾ ಏಸಂತ ಹತೀ ಮಾಡಿದ್ಲೂ.... ನಾನು ಪಾಪಿ.... ಶಿಂದೀ ಕುಡಕುಡದ ಹೊಡದೆ" "ನಡೀರ್‍ಯೋ ಹುಚ್ಚನ ಮಾತೇನು?" ಎನ್ನುತ್ತ ಎಲ್ಲರೂ ಅಲ್ಲಿಂದ ಬಾವಿಯ ಕಡೆಗೋ ಗುಡಿಗೋ ಕಾಲ್ದೆಗೆದರು. ಇನ್ನುಳಿದರು ಗೌರಮ್ಮ ಅವಳ ಮಕ್ಕಳು. ಅವಳಿಗಾಗಿ ತಿನ್ನಲು ಗೌಡಿತಿ ಕೊಟ್ಟ ಸುರಳೀಹೋಳಿಗೀ ಕರಚೀಕಾಯಿಗಳು ಅವಳ ಉಡಿಯಲ್ಲಿ ಹಾಗೆಯೇ ಇದ್ದವು. ಭಿಕಾರಿಯ ಮುಂದೆ ಇಟ್ಟು ಇಕಾ, ತಿನ್ನೂ, ನಿನಗ್ಯಾರೂ ಇಲ್ಲೇನು....? ಎಲ್ಲಿಪ ನೋಡಿದ ಹಾಂಗೈತೀ.... (ಮನಸ್ಸಿನಲ್ಲಿ) ನನ್ನೊಡ್ಯಾ ಬ್ಯಾರೇ ಇರಾಕಿಲ್ಲಾ ಶಿವಾ ಮಾದೇವಾ!" ಮಾದೇವನ ಮೂರ್ತಿಯು ಕಣ್ಣ ಮುಂದೆ ಬಂದಿತು... ಭಿಕ್ಷುಕ ನರಳುತ್ತ ಅಂದ "ಇಲ್ಲಾ ಯಾಕಮ್ಮಾ....ನನಗೆ ಬಂಗಾರದಂತಾ ಹೇಣತಿ, ಮುತ್ತಿನಂತಾ ಯಾಡ್ಡ ಮಕ್ಕಳಿದ್ದೂ...." "ಎಲ್ಲೀಯವ ನೀನೂ...?" "ನಮ್ಮೂರು ಗಟ್ಟದ ಆಚೀಗೆ..." ಗೌರಿ ಬೆಚ್ಚಿದಳು. ಭಿಕಾರಿ ನೋಡಲಿಲ್ಲ..... "ನಿನ್ನ ಹೇಣತೀ ಎಸ್ರೇನು? ಮಕ್ಕಳೆಲ್ಲೆ ದಾವ....?" "ಅಯ್ಯೋ....ನನ್ನ ಕಂತೀ..... ಬಂಗಾರದ ಕಂತೀ,.....ಹಿಂತಾ ಯಾಳೇದಾಗರ ನೀ ನನಗ ದೂರ ಮಾಡಬ್ಯಾಡಾ.....ನಾ ಸಾಯತೇನೀ.... ಸಂಗಟಾ ಬಾಳಾಗತ್ತೈತ್ಯೋ ಶಿವನೇ.....ಕಂತೀ ನನ್ನ ಜೀವದ ಕಂತೀ..... ಏಸ ಊರ ನೋಡಿದ್ನಿ ನಿನ್ನ... ಇನ್ನ ತಿರುಗೂ ದಾಗಾಣೆಲ್ಲಾ.... ಕಂತೀ...ಕಂತೀ...." ಗೌರಿಯಿಂದಿನ್ನು ಸಹಿಸಲಸಾಧ್ಯವಾಯಿತು. ದೊಪ್ಪನೆ ಅವನ ಮೈಮೇಲೆ ಬಿದ್ದಳು. "ಇಕಾ ನಾ ಬಂದೇನಿ. ನಾನs ಕಂತೀ.... ಗೌಡ್ರ ಮನ್ಯಾಗ ತಿಂದುಂಡ ಸುಕದಿಂದದೇನೀ... ಇಕಾ ನಿನ್ನ ಮಕ್ಕಳೂ.... ನಿನ್ನ ನೆಪ್ಪಾಗೇ ಆಗತೈತೀ ಮಕ್ಕಳ ಕಾಲಾಗ ಹೆದರಿ ನಿನ್ನ ಬಿಟ್ಟ ಬಂದೇ.... ಕಡೀಕ ದರ್ಸಣಾ ಕೊಟ್ಯಾ?" ಆತನ ಬೆವರು, ಮೈಯ್ಯ ಹೊಲಸು, ಕೂರಿಬಿದ್ದು ನಾರುತಿದ್ದ ದೇಹದ ನಾತ, ಇವಾವುದರ ಪರಿವೆ ಇಲ್ಲವಳಿಗೆ. ಹೃದಯದಲ್ಲಿ ಹುದುಗಿದ್ದ ಪತಿಭಕ್ತಿಯು ಜಾಗೃತವಾಗಿದೆ. ಮಾಯೆ ಉಕ್ಕಿಬಂದಿದೆ..... ಮಕ್ಕಳನ್ನು ಮುಂದೆ ಕರೆದು ತೋರಿಸಿದಳು. ಇಬ್ಬರನ್ನೂ ಅಪ್ಪಿಕೊಳ್ಳಲೆದ್ದ ಭಿಕ್ಷುಕ. ಮಕ್ಕಳು ಹೆದರಿ ಓಡತೊಡಗಿದವು. ಉಡಿಯೊಳಗಿನ ಸುರುಳಿಹೋಳಿಗೆ ಭಿಕ್ಷುಕನಿಗೆ ತನ್ನ ಕೈಯಿಂದ ತಿನ್ನಿಸಿದಳು. "ಕಂತೀ....ನೀ.... ಆರಾಮ.... ಆದೀ.... ಕಂದವ್ವಗೋಳು

CPMG/KA/BG-8/2003-05 RNI No. 45577/88

Posted at Basavanagudi P.O. On the 25th of every Month

August - 2005

ಬಾಳ ಸನ್ಮಂತ ಆದಾರ.... ದೇವರು ನಿನ್ನ ಬಾವಕ್ಕ ತಕ್ಕ ಪಲಾ ಕೊಟ್ಟಾ ಸುಕಾ ಕಂಡೀ ನಾ ನೋಡು, ಗಿಡದ ಬಡ್ಡ್ಯಾಗ-ಪರದೇಸದಾಗ..... ಆದರೂ ನೀ ಸಿಕ್ಕಿ....ನನ್ನ ದೇವತೀ ನನಗ ಕಂಡಲೂ.... ನಾಯೇನು ಇನ್ನೊಂದ ಗಳಿಗೀಯಾಂವಾ...." ಅವಳು ಬಿಕ್ಕುತ್ತಲೇ ಇದ್ದಳು. ಹಿರಿಮಗನು ಓಡುತ್ತಹೋಗಿ ಮಾದೇವನನ್ನು ಯಾವಾಗ ಕರೆತಂದ, ಅವಳಿಗೆ ಗೊತ್ತಾಗಲಿಲ್ಲ. "ಗೌರಾ!" "ಇಕಾ ಮಾದೇವಾ, ನೋಡು... ಇಂವ.... ಇಂವ"...."ನನ್ನ ಕಂತೀ...." ಮಾದೇವನಿಗೆ ಗೊತ್ತಾಯಿತು. ಭಿಕಾರಿಯೂ ಮಾದೇವನನ್ನು ನೋಡಿದ. "ಎಪ್ಪಾ, ನೀನು ನನ್ನ ಕಂತಿಗೆ ಅನ್ನಾ ಹಾಕಿದ್ಯಾ?....." ಇಲ್ಲವೆಂದು ಗೋಣುಹಾಕಿದ ಮಾದೇವ. "ಇಕಾ ಕಂತೀ....ನೀನೂ ಸಣ್ಣಾಕೀ.... ನಾ ಸತ್ತೆನಂತ ಹಾಂಗs ಉಳೀಬ್ಯಾಡ.... ಮಕ್ಕಳನ್ನ ಹಾಂಗs ನೋಡಪಾ ಅಂದ್ರ ಯಾವನೂ ನೋಡುದುಲ್ಲಾ... ನೀ ಒಬ್ಬಾಂವನ್ನ ನೋಡಿಕೊಂಡು ಉಡಕೀ ಆಗೂ...." ಮಾದೇವನ ಕಣ್ಣಲ್ಲಿ ನೀರು ಬಂದಿತು. ಇಬ್ಬರ ದೃಷ್ಟಿಗಳು ಕೂಡಿದ್ದನ್ನು ಭಿಕ್ಷುಕ ಕಂಡನು... "ಗೊತ್ತಾತೂ... ಎಪ್ಪಾ ರಾಯಾ...ಶೆರೇ-ಶಿಂದೀ ಕುಡಿಬ್ಯಾಡಾ ಹಾಂ..... ನಾ ಶಿಂದೀ ಕುಡದ ಆಕೀಗೆ ಮಕ್ಕಳಿಗೆ ಎರವಾದೇ..... ಕಂ...." ಹಕ್ಕಿಯು ಪಂಜರದೊಳಗಿಂದ ಹಾರಿ ಹೋಯಿತು. ಕಂತೆವ್ವ ಎದೆ ಬಡಿದುಕೊಂಡು ಅಳಲಾರಂಭಿಸಿದಳು; ತನ್ನ ಮಾಂಗಲ್ಯ ಹರಿದು ಅವನ ಮೇಲೆಸೆದು "ತಗೋ ನಿನ್ನ ಮಣೀನ" ಎಂದಳು. ಮಾದೇವ, ಅದು ಸರಿಯಾದ ವೇಳೆ-ಸ್ಥಳವಲ್ಲವೆಂದು ಸಾಮದಳಿನ ಹೇಳಿ, ಗೌಡರ ಕಿವಿಗೆ ಈ ಸುದ್ದಿ ಹೋಗದಂತೆ, ಅಲ್ಲಿಯೇ ದೂರದಲ್ಲಿ ಕಂತೆವ್ವನ ಗಂಡನ ಅಂತ್ಯಸಂಸ್ಕಾರ ಮಾಡಿಸಿದನು.

ದೇವಿಯ ಗುಡ್ಡದಲ್ಲಿಯೇ, ಜಾತ್ರೆಯಲ್ಲಿ ಅವಳ ಗಂಡನ ಮೂರು ದಿನದ ಕರ್ಮ ಮುಗಿಸಿದನು ಮಾದೇವ. ತರುವಾಯ ಮತ್ತೆರಡು ದಿನವಿದ್ದು, ಉಡಿಕೆಯ ಶಿಷ್ಟಾಚಾರ ಮುಗಿಸಿಕೊಂಡು, ಊರಿಗೆ ತೆರಳಿದರು. ಕಂತೆವ್ವ ಮನೆ ಬಿಟ್ಟು ಹೊರಟ ಎರಡು ವರ್ಷಗಳಲ್ಲಿ ಪರಿಸ್ಥಿತಿಯು ಬದಲಾಗಿ, ಅವಳ ಜೀವನವು ಈ ಮೆಟ್ಟಿಗೆ ಬಂದು ನಿಂತಿತ್ತು.

ಬಾಗಿಲು ಬಡಿದ ಸಪ್ಪಳವಾದುದರಿಂದ, ಗೌರಮ್ಮ ಎಚ್ಚತ್ತಳು. ತೊಟ್ಟಿಲು ತೂಗುತ್ತಲೇ ಜೊಂಪು ಹತ್ತಿದಾಗ ಅದೆಲ್ಲ ತಾನು ಕಂಡ ಕನಸೆಂದು ಕಂತೆವ್ವನಿಗೆ ಆಗ ಅರಿವಾಯಿತು. ಹಿಂದಿನ ಎರಡು ವರುಷಗಳ ತನ್ನ ಜೀವನದ ನೆನಪೂ ಮನಸಿನ ಮೇಲೆ ಮೂಡಿತು....

ಮಾದೇವ ಪೇಟೆಯಿಂದ ಮಗುವಿಗೆ ಹುಟ್ಟಿದ ಹಬ್ಬದ ನಿಮಿತ್ತ ತಂದಿದ್ದ ಉಂಗುರವನ್ನೂ ಬೆಳ್ಳಿಯ ಉಡುದಾರವನ್ನೂ ಸುಂದರವಾದ ಬಟ್ಟೆಗಳನ್ನೂ ನೋಡಿ ಹಿಗ್ಗಿದಳು..... ಜೀವನದಲ್ಲಿ ಬರೀ ಕತ್ತಲೆಯೇ ಇಲ್ಲ, ಬೆಳಕೂ ಇದೆಯೆಂದವಳಿಗೆ ಕ್ಷಣ ಹೊತ್ತು ಅನಿಸದೆ ಹೋಗಲಿಲ್ಲ. ❑❑

"Achala" 108, Skyline Surabhi,
14 - P , Vidyapeeta Road,
BSK III Stage,
Bangalore - 560 085

To :

Smt/Sri